ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಇಂಗ್ಲೆಂಡ್ ವಿರುದ್ಧ ಬರ್ಮಿಂಗ್‌ಹ್ಯಾಮ್‌ನಲ್ಲಿ ಮಂಗಳವಾರ ನಡೆದ ಮೊದಲ ಏಕದಿನ ಪಂದ್ಯದಲ್ಲಿ 2 ವಿಕೆಟ್ ಪಡೆದು ಸಂಭ್ರಮಿಸಿದ ಭಾರತ ತಂಡದ ಗುರ್ನೂರ್ ಬ್ರಾರ್... ಭಾರತಕ್ಕೆ 259 ರನ್ ಗುರಿ...

15 ಜುಲೈ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 124 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಮನಸ್ಥಿತಿ ಬದಲಾಗದೆ ಭಾರತ ಸ್ವಚ್ಛವಾಗುವುದಿಲ್ಲ ! » 2

ಕೆಎಸ್‌ಆರ್‌ಟಿಸಿ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ಅಕ್ರಮ ಆರೋಪ » 3

7 ವರ್ಷವಾದರೂ ಮುಗಿಯದ ಕಟ್ಟೇಪುರ ಏತ ನೀರಾವರಿ ಯೋಜನೆ » 4

ಬಿಡದಿ ಟೌನ್‌ಶಿಪ್ ಕೈಬಿಡದಿದ್ದರೆ ಹೋರಾಟ

6 ಬೇಡಿಕೆ ಮುಂದಿಟ್ಟು ಮುಖ್ಯಮಂತ್ರಿಗೆ ಪತ್ರ । ರಾಜ್ಯ ಸರ್ಕಾರಕ್ಕೆ ಹೆಚ್.ಡಿ.ದೇವೇಗೌಡ ಎಚ್ಚರಿಕೆ

• ಪ್ರಜೋದಯ ವರದಿ

ಬೆಂಗಳೂರು: ಬಿಡದಿ ಟೌನ್‌ಶಿಪ್ ಜಟಾಪಟಿ ರಾಜಕೀಯವಾಗಿ ಪರ, ವಿರೋಧ ಚರ್ಚೆಗೆ ಗ್ರಾಸವಾಗಿದೆ. ಈ ನಡುವೆ ರೈತರ ಹೋರಾಟ ತೀವ್ರಗೊಳ್ಳುತ್ತಿದೆ. ಈ ಎಲ್ಲಾ ಬೆಳವಣಿಗೆ ನಡುವೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ 6 ಬೇಡಿಕೆಗಳ ಪತ್ರ ಬರೆದಿದ್ದು, ಸಮಸ್ಯೆಗೆ ಸ್ಪಂದಿಸದಿದ್ದರೆ ಸತ್ಯಾಗ್ರಹದ ಎಚ್ಚರಿಕೆ ನೀಡಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ಯತ್ನವನ್ನು ತಕ್ಷಣ ಕೈಬಿಡಬೇಕು. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ನೀವೇ ಮುಖ್ಯಮಂತ್ರಿಯಾಗಲು ಹೈಕಮಾಂಡ್‌ಗೆ ಏನೇನು ಭರವಸೆ ಕೊಟ್ಟಿದ್ದೀರೋ ಗೊತ್ತಿಲ್ಲ. ಆದರೆ, ಆ ಭರವಸೆಗಳನ್ನು ಈಡೇರಿಸಲು ಬಿಡದಿಯ ರೈತರ ಬದುಕನ್ನೇ ಬಲಿಕೊಡಬೇಡಿ. ರೈತರ ಜಮೀನನ್ನು ಟೌನ್‌ಶಿಪ್ ಹೆಸರಿನಲ್ಲಿ ಕಸಿದುಕೊಂಡು

ನಿಮ್ಮ ಮಾತು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಡಿ ಎಂದು ಸಲಹೆ ನೀಡಿದರು.

ಹೈಕಮಾಂಡ್‌ಗೆ ಖುಷಿ ಪಡಿಸಲು ನಿಮಗೆ ಇನ್ನೂ ಹಲವು ಮಾರ್ಗಗಳಿವೆ. ಆದರೆ, ರೈತರ ಬದುಕಿನೊಂದಿಗೆ ಆಟವಾಡಬೇಡಿ. ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಹೋರಾಟ ನಡೆಸುತ್ತಿರುವ ರೈತರ ಬೆಂಬಲಕ್ಕೆ ನಾವು ಕೂಡ ಇಳಿಯಬೇಕಾದ ಪರಿಸ್ಥಿತಿ ನಿರ್ಮಿಸಬೇಡಿ, ನನ್ನನ್ನು ರೈತರೊಂದಿಗೆ ಪ್ರತಿಭಟನಾ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ಮಾಡಬೇಡಿ. ಅಗತ್ಯವಿದ್ದರೆ ರೈತರ ಪರವಾಗಿ ನಾನು ಕೂಡ ಹೋರಾಟಕ್ಕೆ ಇಳಿಯುತ್ತೇನೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

> **ರಾಜ್ಯ ಸರ್ಕಾರ ಕೈಗೊಂಡಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪ-ನಗರ ಯೋಜನೆಯನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸುತ್ತೇನೆ. ಒಂದು ವೇಳೆ ರಾಜ್ಯ ಸರ್ಕಾರ ನನ್ನ ಈ ಮನವಿಯನ್ನು ತಿರಸ್ಕರಿಸಿದರೆ. ಈಗಾಗಲೇ ನಿರಂತರ ಹೋರಾಟ ಮತ್ತು ಧರಣಿಯಲ್ಲಿ ಇರುವ ರೈತರನ್ನು ಬೆಂಬಲಿಸಿ, ಜೆಡಿಎಸ್ ವತಿಯಿಂದ ರಾಜ್ಯ ಸರ್ಕಾರದ ವಿರುದ್ಧ ವಿಧಾನ ಸೌಧದ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಲಾಗುವುದು.**
> **-ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಮಂತ್ರಿ**

ಇದೇ ವೇಳೆ ಪ್ರತಿಭಟನೆಯಲ್ಲಿ ಭಾಗವಹಿಸಿದ ರೈತರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗಳನ್ನು ತಕ್ಷಣ ಹಿಂಪಡೆಯಬೇಕೆಂದು ಆಗ್ರಹಿಸಿದ ಅವರು, ಈ ಸಂಬಂಧ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದು ಯೋಜನೆಯಿಂದ ಬಿಡದಿ ಸುತ್ತಮುತ್ತ ರೈತರಿಗೆ ಆಗುವ ತೊಂದರೆಗಳೇನೆಂಬುದನ್ನು ವಿವರಿಸಿ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಎಚ್ಚರಿಕೆ ನೀಡಿದ್ದಾರೆ.

2006-08 ಅವಧಿಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಬೆಂಗಳೂರು ನಗರದ ಮೇಲಿನ ಒತ್ತಡ ನಿರ್ವಹಣೆ ಮಾಡುವ ದೂರದೃಷ್ಟಿಯಿಂದ ಮತ್ತು ನಗರ ಮಟ್ಟದಲ್ಲಿ ಹಾದು ಹೋಗುವ ವಾಹನಗಳ ಸಾಂದ್ರತೆಯನ್ನು ತಪ್ಪಿಸಲು ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಐದು ಉಪನಗರಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿತ್ತು. ಬಿಡದಿ ಟೌನ್‌ಶಿಪ್ ಅನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ಕೈಗೆತ್ತಿಕೊಂಡು ನವದೆಹಲಿಯ ಡಿಎಲ್‌ಎಫ್ ಸಂಸ್ಥೆಯಿಂದ 9684 ಎಕರೆ ಜಮೀನಿನಲ್ಲಿ ಉಪನಗರ ನಿರ್ಮಿಸಲು ನಿರ್ಧರಿಸಲಾಯಿತು. ಆದರೆ, ರೈತರ ವಿರೋಧ ಮತ್ತು ಇಂತಹ ಬೃಹತ್ ಗಾತ್ರದ ಯೋಜನೆಯಿಂದ ಸ್ಥಳೀಯವಾಗಿ

ಟೌನ್‌ಶಿಪ್ ಯೋಜನೆ ವಿರುದ್ಧ ಅನಿರ್ದಿಷ್ಟಾಧಿ ಧರಣಿ ನಡೆಸುತ್ತಿರುವ ರೈತರು ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ವಿರೋಧಿಸಿ ಮಂಗಳವಾರ ವಿಷದ ಬಾಟಲಿ ಪ್ರದರ್ಶಿಸಿದರು. ಕೂಗಳತೆ ದೂರದಲ್ಲಿ ಯೋಜನೆ ಪರವಾಗಿ ಧರಣಿ ನಡೆಸುತ್ತಿರುವ ರೈತರು ಜೆಎಂಸಿ ಮಾಡುವಂತೆ ಆಗ್ರಹಿಸಿ ರಸ್ತೆ ತಡೆ ಮಾಡಿದರು.

ಉಂಟಾಗುವ ಪರಿಣಾಮಗಳನ್ನು ಪರಿಗಣಿಸಿ. ಈ ಯೋಜನೆಯನ್ನು ಕೈಬಿಡಲಾಯಿತು. ಆದರೆ, ಈ ಯೋಜನೆಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಿರುವುದಿಲ್ಲವೆಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಂಕಿ-ಅಂಶ ಬಿಡುಗಡೆ

ಯೋಜನಾ ವ್ಯಾಪ್ತಿಯಲ್ಲಿರುವ ಸಣ್ಣ ಹಿಡುವಳಿದಾರರ ಪರ ಬ್ಯಾಟ್ ಬೀಸಿದ ಅವರು, 2,555 ರೈತರಿಗೆ 1 ರಿಂದ 5 ಗುಂಟೆ ಇದ್ದರೆ 1,653 ರೈತರಿಗೆ 10 ರಿಂದ 20 ಗುಂಟೆ ಜಾಗ ವಿದೆ. 2,257 ರೈತರಿಗೆ 20 ರಿಂದ 40 ಗುಂಟೆ ಇದ್ದರೆ, 1,342 ರೈತರಿಗೆ 1 ರಿಂದ 2 ಎಕರೆ ಜಾಗವಿದೆ. ಭೂಮಿ ಕೊಡಲು ಒಪ್ಪಿರುವವರು ಹಳ್ಳಿಯಲ್ಲಿಲ್ಲ, ಬೆಂಗಳೂರಿನಲ್ಲಿದ್ದಾರೆ. ಅವರದ್ದು ಕೇವಲ 17 ಎಕರೆ ಜಾಗ ಮಾತ್ರವೆಂದು ಭೂಮಿ ಕಳೆದುಕೊಳ್ಳುತ್ತಿರುವ ರೈತರ ವಿವರವನ್ನು ದೇವೇಗೌಡ ಅವರು ನೀಡಿದರು.

ಜೋಳಕ್ಕೆ ಬಿಳಿ ಸುಳಿ ರೋಗ: ವಿಶೇಷ ಪ್ಯಾಕೇಜ್‌ಗೆ ಸಿ.ಎಂ.ಗೆ ಮನವಿ



• ಪ್ರಜೋದಯ ವರದಿ

ಹಾಸನ: ಮುಸುಕಿನ ಜೋಳಕ್ಕೆ ಬಿಳಿ ಸುಳಿ ರೋಗ ವ್ಯಾಪಕವಾಗಿ ಹರಡಿದ್ದು, ರೈತರಿಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸುವಂತೆ ಒತ್ತಾಯಿಸಿ ಸಂಸದ ಶ್ರೇಯಸ್ ಪಟೇಲ್, ಗೃಹಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ನೇತೃತ್ವದ ನಿಯೋಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಿರುವ ಜೋಳ ಬಿಳಿಸುಳಿ ರೋಗಕ್ಕೆ ತುತ್ತಾಗಿ, ರೈತರು ನಷ್ಟ ಅನುಭವಿಸುವಂತಾಗಿದೆ. ಬೆಳೆಗಾಗಿ ಮಾಡಿದ ಹೂಡಿಕೆ ಸಹ ಮರಳಿ ಪಡೆಯಲಾಗದ ಸ್ಥಿತಿಗೆ ಸಿಲುಕಿದ್ದಾರೆ. ಕಳೆದ ವರ್ಷವೂ ಇದೇ ಪರಿಸ್ಥಿ ಇತ್ತು. ಈ ಬಾರಿ ಸರ್ಕಾರ ರೈತರ ನೆರವಿಗೆ ದಾವಿಸಬೇಕೆಂದು ಮನವಿ ಮಾಡಿದ್ದಾರೆ.

ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿತ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸುವಂತೆ ಸೂಚನೆ ನೀಡಿದ್ದಾರೆ. ಈ ಕುರಿತು ಸಂಸದ ಶ್ರೇಯಸ್ ಪಟೇಲ್ ಅವರು ಪ್ರತಿಕ್ರಿಯಿಸಿ, ಮುಸುಕಿನ ಜೋಳದ ಹಾನಿಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ರಾಜ್ಯ ಸರ್ಕಾರ ರೈತರಿಗೆ ನ್ಯಾಯಯುತ ಪರಿಹಾರ ಘೋಷಿಸುವ ವಿಶ್ವಾಸವಿದೆ. ರೈತರ ಸಂಕಷ್ಟದ ಸಂದರ್ಭದಲ್ಲಿ ಧ್ವನಿಯಾಗಿ ನಿಲ್ಲುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ತಿಳಿಸಿದ್ದಾರೆ. ನಿಯೋಗದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಇದ್ದರು.

ಜು.19ಕ್ಕೆ ಕೆ.ಟಿ.ಶಿವಪ್ರಸಾದ್ ನುಡಿ ನಮನ

• ಪ್ರಜೋದಯ ವರದಿ

ಹಾಸನ: ಅಂತರ್‌ರಾಷ್ಟ್ರೀಯ ಚಿತ್ರ ಕಲಾವಿದ ಕೆ.ಟಿ.ಶಿವಪ್ರಸಾದ್ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನು ಹಾಸನಾಂಬ ಕಲಾಕ್ಷೇತ್ರದಲ್ಲಿ ಜು. 19ರ ಭಾನುವಾರ ಆಯೋಜಿಸಲಾಗಿದೆ ಎಂದು ಕೆ.ಟಿ.ಶಿವಪ್ರಸಾದ್ ಬಳಗದ ಆರ್.ಪಿ.ವೆಂಕಟೇಶ್‌ಮೂರ್ತಿ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು.ಕೃಷ್ಣಶೆಟ್ಟಿ, ಸಾಹಿತಿ ಬಾನು ಮುಷ್ತಾಕ್, ಮಾಜಿ ಸಂಸದ ಎಲ್.ಹನುಮಂತಯ್ಯ, ದಲಿತ ಚಳವಳಿಯ ಮಾವಳ್ಳಿ ಶಂಕರ್, ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಕವಿ ಸುಬ್ಬು ಹೊಲೆಯಾರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕುವೆಂಪು ಪ್ರತಿಷ್ಠಾನದ ಕಡಿದಾಳ್ ಪ್ರಕಾಶ್, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ, ಮಹೇಂದ್ರ ಕಾರ್ಲೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದರು.

ಕೆ.ಟಿ.ಶಿವಪ್ರಸಾದ್ ಕೇವಲ ಚಿತ್ರ ಕಲಾವಿದರಾಗಿ ಮಾತ್ರವಲ್ಲದೆ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದರು. ದಲಿತರು, ರೈತರು, ಕೂಲಿ ಕಾರ್ಮಿಕರು, ಮಹಿಳೆಯರು, ಅಲ್ಪಸಂಖ್ಯಾತರು ಹಾಗು ಶೋಷಿತ ವರ್ಗಗಳ ಹಕ್ಕುಗಳಿಗಾಗಿ ನಡೆದ ಅನೇಕ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಪರ ಚಳವಳಿಗಳಿಗೆ ಸೈದ್ಧಾಂತಿಕ ಹಾಗು ಸಾಂಸ್ಕೃತಿಕ ಬಲ ತುಂಬಿದ್ದಾರೆ. 1980ರ ಅವಧಿಯಲ್ಲಿ ಬಾಳ್ಳುಪೇಟೆಯಲ್ಲಿ ನಡೆದ ರೈತರ ಮನೆ ಜಪ್ತಿ ವಿರೋಧಿ

» ನಾಲ್ಕನೇ ಪುಟದಲ್ಲಿ

ಹೆಚ್‌ಆರ್‌ಪಿ ಹಗರಣ: ಅಧಿಕಾರಿಗಳ ಮೇಲೆ ತೂಗುಗತ್ತಿ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

- ಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ
- ವಿವಿಧ ಭೂಕಬಳಿಕೆಯಲ್ಲಿ ಭಾಗಿಯಾದವರಿಗೂ ನಡುಕ



ಅಧಿಕಾರಿಗಳು, ನೌಕರರ ವಿರುದ್ಧ ವರದಿ

ಜಿಲ್ಲೆಯಲ್ಲಿ ನಡೆದಿರುವ ಅಕ್ರಮ ಭೂಮಂಜೂರಾತಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 210 ಅಧಿಕಾರಿಗಳು, ನೌಕರರ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ವರದಿ ಕಳುಹಿಸಲಾಗಿದೆ. ಇದರಲ್ಲಿ ತಹಶೀಲ್ದಾರ್, ಎಸ್‌ಎಲ್‌ಒ ಸೇರಿ ಗ್ರೂಪ್ ಸಿ ನೌಕರರು ಇದ್ದಾರೆ. ಮಂಜೂರಾತಿ ನೀಡಿದ್ದ 977 ಪ್ರಕರಣಗಳನ್ನು ರದ್ದು ಮಾಡಲಾಗಿದೆ. ಅದನ್ನು ಪ್ರಶ್ನೆ ಮಾಡಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಹೈಕೋರ್ಟ್ ನಲ್ಲೂ ಕೂಡ ವಿಚಾರಣೆ ನಡೆಯುತ್ತಿದೆ.

ಹೆಚ್‌ಆರ್‌ಪಿ ಹಗರಣದ ಆರೋಪಿಗಳು ಹಾಗು ಅಕ್ರಮ ಭೂ ಮಂಜೂರಾತಿ ಸಂಬಂಧ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಸೇರಿ ಕೆಲ ಅಧಿಕಾರಿಗಳನ್ನು ಬಂಧಿಸಿ, ವಿಚಾರಣೆ ತೀವ್ರಗೊಳಿಸಿದೆ.

ನಗರದ ಕೈಗಾರಿಕೆ ಪ್ರದೇಶದಲ್ಲಿ 2 ದಶಕಗಳ ಹಿಂದೆ ಐಐಟಿ ಸ್ಥಾಪನೆಗಾಗಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಸ್ವತಃ ಸಭೆ ನಡೆಸಿ ಪರಿಹಾರದ ಭರವಸೆ ನೀಡಿದ್ದಾರೆ. ಇದೀಗ ಜಿಲ್ಲೆಯ ಬಹುದೊಡ್ಡ ಹಗರಣವಾಗಿರುವ ಹೆಚ್.ಆರ್.ಪಿ.ಯನ್ನು ಕೈಗೆತ್ತಿಕೊಂಡಿರುವುದರಿಂದ ಅಕ್ರಮ ಎಸಗಿದ ಅಧಿಕಾರಿಗಳಿಗೆ ನಡುಕ ಶುರುವಾಗುವಂತೆ ಮಾಡಿದೆ.

210 ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು

ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಹೇಮಾವತಿ, ಯಗಚಿ, ವಾಟೆಹೊಳೆ ಜಲಾಶಯ ಯೋಜನೆಗಳಡಿ ಮುಳುಗಡೆ ಸಂತ್ರಸ್ತರ ಹೆಸರಿನಲ್ಲಿ 2015 ರಿಂದ 2019ರ ಅವಧಿಯಲ್ಲಿ 977 ಜನರಿಗೆ ಅನಧಿಕೃತ ಭೂ ಮಂಜೂರಾತಿಯನ್ನು ರದ್ದುಗೊಳಿಸಿ, ಅಕ್ರಮದಲ್ಲಿ ಭಾಗಿಯಾಗಿದ್ದ 210 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತ ವರ್ಷಗಳ ಹಿಂದೆಯೇ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ವರದಿಯನ್ನೂ ಆಧರಿಸಿ ಕ್ರಮಕ್ಕೆ ಸರ್ಕಾರ ಮುಂದಾಗಲಿದೆ ಎಂಬ ಮಾಹಿತಿ ಕೇಳಿ ಬರುತ್ತಿದೆ. ಭೂಸಂತ್ರಸ್ತರ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ನಕಲಿ ಸೀಲ್, ನಕಲಿ ಸಹಿ ಮಾಡಿ 2015 ರಿಂದ 2019ರ ವರೆಗೆ 977 ಪ್ರಕರಣದಲ್ಲಿ ಅನಧಿಕೃತವಾಗಿ ಭೂ ಮಂಜೂರಾತಿ ನೀಡಲಾಗಿತ್ತು. ಅದನ್ನು ಈಗಾಗಲೇ ರದ್ದುಗೊಳಿಸಲಾಗಿದೆ. ಭೂ ಮಂಜೂರಾತಿ ಪ್ರಕರಣದಲ್ಲಿ ಭಾಗಿಯಾಗಿದ್ದ ವಿಶೇಷ ಭೂಸ್ವಾಧೀನಾಧಿಕಾರಿಗಳು (ಎಸ್‌ಎಸ್‌ಒ) ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್‌ಗಳು, ಶಿರಸ್ತೇದಾರ್‌ಗಳು, ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು ಸೇರಿ ಒಟ್ಟು 210 ಜನರ ವಿರುದ್ಧ ಪ್ರಕರಣ ದಾಖಲಿಸಿ ಶಿಸ್ತಿ ಕ್ರಮ ಜರುಗಿಸುವಂತೆ ಜಿಲ್ಲಾಡಳಿತ ಸರ್ಕಾರಕ್ಕೆ ವರದಿ ನೀಡಿದೆ. ಹೀಗಾಗಿ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ತೂಗುಗತ್ತಿ ನೇತಾಡುತ್ತಿದೆ. ಇದರಲ್ಲಿ ಹಲವು ಅಧಿಕಾರಿಗಳು ಈಗಾಗಲೇ ನಿವೃತ್ತರಾಗಿದ್ದಾರೆ, ಇನ್ನು ಕೆಲವರು ನಿವೃತ್ತಿ ಅಂಚಿನಲ್ಲಿದ್ದಾರೆ.

ಸರ್ಕಾರಕ್ಕೆ ವರದಿ ಸಲ್ಲಿಕೆ

ಅಕ್ರಮ ಭೂಮಂಜೂರಾತಿ ಪ್ರಕರಣದ ತನಿಖೆಗೆ ಹಾಸನ, ಸಕಲೇಶಪುರ ಉಪವಿಭಾಗ ಮತ್ತು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್‌ಗಳನ್ನು ಒಳಗೊಂಡಂತೆ 10 ತಂಡಗಳ ಸಮಿತಿ ರಚಿಸಿ 2015 ರಿಂದ 2019 ರವರೆಗೆ ಅಕ್ರಮವಾಗಿ ಮಂಜೂರಾಗಿರುವ ಪ್ರಕರಣಗಳನ್ನು ಪರಿಶೀಲಿಸಿ, 977 ಅನಧಿಕೃತ ಭೂಮಂಜೂರಾತಿಯನ್ನು ರದ್ದುಪಡಿಸಲಾಗಿದೆ. ಅಲ್ಲದೆ ಈ ಅವಧಿಯಲ್ಲಿ ನಿಯಮ ಉಲ್ಲಂಘಿಸಿ ಭೂಮಂಜೂರಾತಿ ಪ್ರಕ್ರಿಯೆ ನಡೆಸಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕರ್ತವ್ಯ ಲೋಪ ಎಸಗಿರುವುದು ದೃಢಪಟ್ಟಿದೆ.

ಹೀಗಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಹೇಮಾವತಿ ಜಲಾಶಯ ವಿಶೇಷ ಭೂಸ್ವಾಧೀನಾಧಿಕಾರಿಗಳು ಕಡತಗಳನ್ನು ಸಭೆಯಲ್ಲಿ ಮಂಡಿಸಿದ್ದು, ಅದರಂತೆ ಜಿಲ್ಲಾಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಮೊಹಮ್ಮದ್ ಮೊಸೀನ್ ನೇತೃತ್ವದಲ್ಲಿ ತನಿಖೆ

ಹೆಚ್‌ಆರ್‌ಪಿ ಹಗರಣಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಮೊಹಮ್ಮದ್ ಮೊಸೀನ್ ಅವರ ನೇತೃತ್ವದಲ್ಲಿ ಸರ್ಕಾರ ತನಿಖೆ ನಡೆಸಿತ್ತು. ಆದರೆ, ತನಿಖೆ ಪೂರ್ಣಗೊಂಡಿಲ್ಲ. ಕೆಲ ಪ್ರಕರಣಗಳಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಆ ಪ್ರಕಾರ ಮಂಜೂರಿದಾರರಿಗೆ ನೋಟೀಸ್ ನೀಡಿ, ಪ್ರತಿಕ್ರಿಯೆ ಬಾರದಿದ್ದಾಗ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿತ್ತು. ವಿಚಾರಣೆಗೆ ಬಂದ ಸಂತ್ರಸ್ತರ ವಿಚಾರಣೆ ನಡೆಸಲಾಯಿತು, ಆಗ ನಿಗದಿತ ದಾಖಲೆಗಳನ್ನು ನೀಡದಿದ್ದರಿಂದ 977 ಪ್ರಕರಣಗಳನ್ನು ರದ್ದು ಮಾಡಲಾಗಿದೆ. ಹೇಮಾವತಿ ಸಂತ್ರಸ್ತರಿಗೆ ಮೀಸಲಾಗಿರುವ ಜಮ

ಮನಸ್ಥಿತಿ ಬದಲಾಗದೆ ಭಾರತ ಸ್ವಚ್ಛವಾಗುವುದಿಲ್ಲ!

> ಕಾಂಬೋಡಿಯದಲ್ಲಿ ಕಸವೇ ಇಲ್ಲವೇ ಎನ್ನುವ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಎದ್ದಿರುತ್ತದೆ. ಅಂದು, ಇಂದು ಬಡಾವಣೆಗಳಲ್ಲಿ ಸ್ವಚ್ಛತೆಯಿಲ್ಲ. ಆದರೆ ಮೆಜಾರಿಟಿ ಸ್ವಚ್ಛವಾಗಿದೆ. ನಮ್ಮಲ್ಲಿ ಅಂದು ಇಂದು ಏರಿಯಾ ಸ್ವಚ್ಛವಾಗಿದೆ. ಮೆಜಾರಿಟಿ ಕೆಟ್ಟದಾಗಿ ಇಟ್ಟು ಕೊಂಡಿದ್ದೇವೆ. ಈಗ ನಿಮ್ಮಲ್ಲಿ ಇನ್ನೊಂದು ಪ್ರಶ್ನೆಯೂ ಎದ್ದಿರುತ್ತದೆ...

ವಿಶ್ವರಂಗ

ನಾವೇಕೆ ಹೀಗೆ? ಎನ್ನುವ ಪ್ರಶ್ನೆ ಇವತ್ತು ನಿನ್ನೆಯದಲ್ಲ, ಈ ಪ್ರಶ್ನೆ ಶುರುವಾಗಿ ನಾಲ್ಕು ದಶಕವಾಗಿದೆ. ಸ್ವಲ್ಪ ಬುದ್ಧಿ ತಿಳಿಯುವುದಕ್ಕೆ ಶುರುವಾದಾಗಿನಿಂದ ಈ ಪ್ರಶ್ನೆ ಸದಾ ಮರುಕಳಿಸುತ್ತಿದೆ. ಉತ್ತರ ಮಾತ್ರ ಇನ್ನೂ ಸಿಕ್ಕಿಲ್ಲ. ಕಳೆದ ವಾರ ಗೆಳೆಯರೊಂದಿಗೆ ಕಾಂಬೋಡಿಯಾ ದೇಶಕ್ಕೆ ಹೋಗುವ ಅವಕಾಶವಾಗಿತ್ತು. ಕಾಂಬೋಡಿಯಾ ದೇಶವನ್ನು ಭಾರತದೊಂದಿಗೆ ಹೋಲಿಸುವಂತಿಲ್ಲ. ಅದೊಂದು ಪುಟಾಣಿ ದೇಶ. ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯಕ್ಕಿಂತ ಸ್ವಲ್ಪ ಚಿಕ್ಕದು. ಆದರೆ ಜನಸಂಖ್ಯೆ ಲೆಕ್ಕಾಚಾರದಲ್ಲಿ ಜಾರ್ಖಂಡ್ ರಾಜ್ಯಕ್ಕೆ ಇದು ಸಮವಾಗಿದೆ. ಇಲ್ಲಿನ ಜನಸಂಖ್ಯೆ ಸರಿಸುಮಾರು 1.8 ಕೋಟಿ. ಲೆಕ್ಕಾಚಾರದ ದೃಷ್ಟಿಯಲ್ಲಿ ಹೇಳಿಕೊಳ್ಳುವಂತಹ ಸಿರಿವಂತ ದೇಶವೇನೂ ಅಲ್ಲ.

ಹೇಳಿಕೊಳ್ಳುವಂತಹ ಅವಕಾಶಗಳು ಕೂಡ ಜನರ ಮುಂದಿಲ್ಲ. ಹೇಗೋ ಜೀವನ ಸಾಗಿಸಲು ಅಡ್ಡಿಯಿಲ್ಲ ಎನ್ನವಷ್ಟರ ಮಟ್ಟಿಗೆ ದೇಶ ನಡೆಯುತ್ತಿದೆ. ಜನರು ಕೂಡ ತೃಪ್ತ ಮನೋಭಾವದವರು. ಅಲ್ಲಿ ಇಳಿದ ತಕ್ಷಣ ಮನಸ್ಸಿನಲ್ಲಿ ದಶಕಗಳಿಂದ ಕಾಡುವ ಪ್ರಶ್ನೆ ನಾವೇಕೆ ಹೀಗೆ? ಎನ್ನುವುದು ಮತ್ತೆ ಕಾಡಲು ಶುರುವಾಯ್ತು. ಅಲ್ಲಿ ಬಡತನವಿದೆ, ಹೇಳಿಕೊಳ್ಳುವ ಅವಕಾಶಗಳಿಲ್ಲ, ಆದರೆ ಜನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುತ್ತಾರೆ. ಸಮಾಜದ ಸ್ವಚ್ಛತೆ ಬಗ್ಗೆ ಅವರಿಗೆ ಕಾಳಜಿಯಿದೆ. ರಸ್ತೆ ಬದಿಯಲ್ಲಿ ಹಣ್ಣು ಮಾರುವವರು ಕೂಡ ಕೈಗೆ ಗ್ಲೋ ಹಾಕಿಕೊಂಡಿರುತ್ತಾರೆ. ಸಿಪ್ಪೆ, ಕವರು ಇತ್ಯಾದಿ ರಸ್ತೆಗೆ ಹಾಕುವುದಿಲ್ಲ, ಎಲ್ಲವೂ ಅವರು ಹೊತ್ತು ತರುವ ಕಸದ ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಾರೆ. ಅಪ್ಪಿ ತಪ್ಪಿ ಕೆಳಕ್ಕೆ ಕಸ ಬಿದ್ದರೆ ಚೂರೂ ಬೇಸರ ತೋರಿಸದೆ ಅದನ್ನು ಎತ್ತಿ ಕಸದ ಬುಟ್ಟಿಗೆ ಹಾಕುತ್ತಾರೆ.

ಇಲ್ಲಿಯವರೆಗೆ ನಾನು ನೋಡಿದ ದೇಶಗಳ ಸಂಖ್ಯೆ ಎಪ್ಪತ್ತಾಯ್ತು. ಸ್ವಚ್ಛತೆ ಎನ್ನುವುದು ಸಿರಿತನ-ಬಡತನದ ಮೇಲೆ ನಿರ್ಭರವಾಗಿಲ್ಲ ಎನ್ನುವುದು ಮತ್ತೊಮ್ಮೆ ಮನದಟ್ಟಾಯ್ತು. ಅದು ಮನಸ್ಥಿತಿ. ನಮ್ಮ ದೇಶದಲ್ಲಿ ಜನರ ಮನಸ್ಥಿತಿ ಬದಲಾಗುವುದು ಯಾವಾಗ? ನಾವು ಸ್ವಚ್ಛ ಸಮಾಜವಾಗುವುದು ಯಾವಾಗ? ಎನ್ನುವ ಪ್ರಶ್ನೆಗೆ ಉತ್ತರ ಯಾವಾಗ ಸಿಗುತ್ತದೆ ಎನ್ನುವುದು ಕೂಡ ಗೊತ್ತಿಲ್ಲ.

ಕಾಂಬೋಡಿಯದಲ್ಲಿ ಕಸವೇ ಇಲ್ಲವೇ ಎನ್ನುವ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಎದ್ದಿರುತ್ತದೆ. ಅಂದು, ಇಂದು ಬಡಾವಣೆಗಳಲ್ಲಿ ಸ್ವಚ್ಛತೆಯಿಲ್ಲ. ಆದರೆ ಮೆಜಾರಿಟಿ ಸ್ವಚ್ಛವಾಗಿದೆ. ನಮ್ಮಲ್ಲಿ ಅಂದು ಇಂದು ಏರಿಯಾ ಸ್ವಚ್ಛವಾಗಿದೆ. ಮೆಜಾರಿಟಿ ಕೆಟ್ಟದಾಗಿ ಇಟ್ಟು ಕೊಂಡಿದ್ದೇವೆ. ಈಗ ನಿಮ್ಮಲ್ಲಿ ಇನ್ನೊಂದು ಪ್ರಶ್ನೆಯೂ ಎದ್ದಿರುತ್ತದೆ. ಜಪಾನ್, ಸಿಂಗಾಪುರ, ಕಾಂಬೋಡಿಯಾ, ದುಬೈ, ಯೂರೋಪಿನ ದೇಶಗಳ ಬಗ್ಗೆ ಹೇಳಿದಾಗೆ ಅಲ್ಲಿ ಜನಸಂಖ್ಯೆ ಕಡಿಮೆ, ಪುಟ್ಟ ದೇಶ, ಅವುಗಳನ್ನು ನಿಯಂತ್ರಿಸುವುದು ಬಹಳ ಸುಲಭ, ಇತ್ಯಾದಿ ಸಬೂಬು ಹೇಳಿ, ನಮ್ಮ ದೇಶ ಸ್ವಚ್ಛವಿಲ್ಲದಿರುವುದಕ್ಕೆ ನಾವೇ ಕಾರಣ ಕೊಟ್ಟುಕೊಂಡು, ಮನಸ್ಸಿಗೆ ಸಮಜಾಯಿಷಿ ಹೇಳಿಕೊಳ್ಳುವುದು ಸಾಮಾನ್ಯವಾಗಿದೆ.

ಆದರೆ ನಮ್ಮ ನೆರೆ ರಾಷ್ಟ್ರ ಚೀನಾವನ್ನು ಒಮ್ಮೆ ನೋಡಿ ಕೊಂಡು ಬನ್ನಿ ಪ್ಲೀಸ್. ಜನಸಂಖ್ಯೆ, ವಿಸ್ತೀರ್ಣ ಎರಡರಲ್ಲೂ ಭಾರತಕ್ಕೆ ಸರಿಸಾಟಿ ಎನ್ನುವಂತಿರುವ ಚೀನಾ, ಪಾಶ್ಚಾತ್ಯ ದೇಶಗಳು ನಿಬ್ಬೆರಗಾಗಿ ನೋಡುವಷ್ಟು ಸ್ವಚ್ಛವಾಗಿದೆ. ಕೆಲವು ನಗರಗಳು ಮಾತ್ರ ಚೆನ್ನಾಗಿದೆ, ಚೀನಾ ಬಹಳಷ್ಟು ಪ್ರದೇಶಗಳನ್ನು ಜನರಿಗೆ ತೋರಿಸುತ್ತಿಲ್ಲ ಇತ್ಯಾದಿ ಮಾತುಗಳು ಕೂಡ ಬರುತ್ತವೆ. ಆದರೆ ಗಮನಿಸಿ ಚೀನಾ ಯಾವುದನ್ನು ಜಗತ್ತಿಗೆ ತೋರಿಸುತ್ತಿದೆ ಅಷ್ಟು ಚೆನ್ನಾಗಿದೆ ಎನ್ನುವುದನ್ನು ಒಪ್ಪಿಕೊಳ್ಳಲು ಅಡ್ಡಿಯಿಲ್ಲವಷ್ಟೆ? ನಾವು ಮೊದಲಿಗೆ ಅಷ್ಟನ್ನು ಮಾಡೋಣ ಅಲ್ಲವೇ? ಚೀನಾ ಭಾರತವನ್ನು ಐವತ್ತು ವರ್ಷ ಹಿಂದಕ್ಕಿಕ್ಕಿ ಮುಂದೆ ಹೋಗಿದೆ. ಪಾಶ್ಚಾತ್ಯ ದೇಶಗಳು ಕೂಡ ಚೀನಾಗಿಂತ ಕನಿಷ್ಠ ಎರಡು ದಶಕ ಹಿಂದಿವೆ.

ನಮ್ಮದು ಸೋಗಲಾಡಿ ಸಮಾಜ ಎನ್ನುವುದನ್ನು ನಾನು ದಶಕಗಳಿಂದ ಹೇಳುತ್ತಾ ಬಂದಿದ್ದೇನೆ. ನಾವು ನಮ್ಮ ನೆಲವನ್ನು ಮಾತೆ ಎನ್ನುತ್ತೇವೆ, ಹೆಣ್ಣನ್ನು ದೇವತೆ ಎನ್ನುತ್ತೇವೆ, ಗೋವನ್ನು ಮಾತೆ ಎನ್ನುತ್ತೇವೆ, ಆದರೆ ಅವುಗಳಿಗೆ ನಾವು ಕೊಡುತ್ತಿರುವ ಗೌರವವೆಷ್ಟು? ನಮ್ಮ ಇಷ್ಟ ದೇವರುಗಳ ಪಟವನ್ನು ರಸ್ತೆಯಲ್ಲಿ, ಯಾವುದೋ ಮರದ ಬುಡದಲ್ಲಿ ಬಿಸಾಕಿ ಹೋಗುತ್ತೇವೆ. ನಾನು ಹೆಸರು ಹೇಳಲು ಹೋಗುವುದಿಲ್ಲ, ಕೆಲವು ಪ್ರಸಿದ್ಧ ದೇವಾಲಯಗಳಿರುವ ಊರುಗಳಲ್ಲಿ ಕಾಲಿಡಲು ಯೋಚಿಸಬೇಕು ಅಷ್ಟು ಗಲೀಜು ತಾಂಡವವಾಡುತ್ತಿದೆ. ದೇವರ ಹೆಸರು ಹೇಳುವ ನಾವು ಶುಚಿಯಾಗಿ ಇಟ್ಟುಕೊಳ್ಳದೆ ಇರುವುದು ಆ ದೈವಕ್ಕೆ ಮಾಡಿದ ಅವಮಾನ ಎಂದೇಕೆ ಅಂದು ಕೊಳ್ಳುವುದಿಲ್ಲ. ದೇವರ ಹೆಸರು ಹೇಳಿ ಏಕೆ ನಾವು ಶುಚಿತ್ವವನ್ನು ಕಾಪಾಡಲು ಸಾಧ್ಯವಿಲ್ಲ?

ಇವತ್ತಿಗೆ ಎರಡು ಅಥವಾ ಮೂರು ದಶಕದ ಹಿಂದಿನ ಭಾರತವಾಗಿ ನಾವು ಉಳಿದಿಲ್ಲ. ಆರ್ಥಿಕವಾಗಿ ಭಾರತ ಬಲಿಷ್ಠವಾಗಿದೆ. ಆದರೆ ಮನಸ್ಥಿತಿ? ಶುಚಿತ್ವದ ಬಗ್ಗೆ ನಮ್ಮ ಮನಸ್ಥಿತಿ ಮಾತ್ರ ಬದಲಾಗಿಲ್ಲ. ನಿಜ ಹೇಳಬೇಕೆಂದರೆ ಇನ್ನಷ್ಟು ಕೆಟ್ಟದಾಗಿದೆ. ಐಷಾರಾಮಿ ಕಾರುಗಳಲ್ಲಿ ಪ್ರಯಾಣ ಮಾಡುತ್ತಾ ಕಿಟಕಿಯ ಗ್ಲಾಸು ಇಳಿಸಿ ಚಿ ಖಾಲಿ ಕವರು ಇತ್ಯಾದಿ ಎಸೆದು ಹೋಗುತ್ತಾರೆ. ನಿಜವಾಗಿ ಸ್ವಚ್ಛತೆ ಬಗ್ಗೆ ಕಾಳಜಿಯೇ ನಮ್ಮ ಸಮಾಜದಲ್ಲಿಲ್ಲ. ಭಾರತ ಮಾತ್ರ ಹೀಗೆ ಅಂತಲ್ಲ.

ಇವತ್ತು ನಾವು ನೋಡುತ್ತಿರುವ ಜಗಮಗಿಸುವ ಮಲೇಷ್ಯಾ ದೇಶದ ರಸ್ತೆಗಳಲ್ಲಿ ಥೇಟ್ ನಮ್ಮಲ್ಲಿರುವಂತೆ ಕಸದ ರಾಶಿ ಇರುತ್ತಿತ್ತು. ಅದು ಕೊಳೆತು ನಾರುತ್ತಿತ್ತು. ಲಂಡನ್ ನಗರದಲ್ಲಿರುವ ಥೇಮ್ಸ್ ನದಿ ಥೇಟ್ ನಮ್ಮ ವೃಷಭಾವತಿ ನದಿಯಂತೆ ವಾಸನೆ ಹೊಡೆಯುತ್ತಿತ್ತು, ಅಷ್ಟು ಬದಲಿಸಲಾಗದ ಮಟ್ಟಿಗೆ ಅದು ಗಬ್ಬೆದ್ದು ಹೋಗಿತ್ತು. ಇವತ್ತಿಗೆ ಥೇಮ್ಸ್ ನದಿಯ ದಂಡೆಯಲ್ಲಿ ಜನ ಕುಳಿತು ಹರಟೆ ಹೊಡೆಯುತ್ತಾರೆ. ನಾನು ಪ್ರಥಮವಾಗಿ 99ರಲ್ಲಿ ದುಬೈ ತಲುಪಿದಾಗ ಅದು ಇವತ್ತಿನ ಪ್ರಜ್ವಲತೆಯನ್ನು ಗಳಿಸಿಕೊಂಡಿರಲಿಲ್ಲ ನಿಜ, ಆದರೆ ಜನ ರಸ್ತೆಯಲ್ಲಿ ಉಗುಳುವುದಕ್ಕೆ ಹೆದರುತ್ತಿದ್ದರು. ಅಂದಿಗೆ ರಸ್ತೆಯಲ್ಲಿ ಉಗುಳಿದರೆ ಮೂವತ್ತು ಧಿರಾಮ್ ದಂಡ ವಿಧಿಸಲಾಗುತ್ತಿತ್ತು. ಇದೇ ಭಾರತೀಯರು ದುಬೈನಲ್ಲಿ ಉಗುಳುವುದಕ್ಕೆ, ಸಿಗ್ನಲ್ ಜಂಪ್ ಮಾಡುವುದಕ್ಕೆ ಹೆದರುತ್ತಾರೆ. ದಂಡದ ಭಯ.

ಇನ್ನು ಯೂರೋಪಿನಲ್ಲಿ ಕೂಡ ಜನ ಗಲೀಜು ಮಾಡುವುದಿಲ್ಲ ಅಂತೇನಿಲ್ಲ. ಭಾನುವಾರದ ಸಂತೆ, ಬುಧವಾರದ ಸಂತೆ, ಕಳ್ಳ ಸಂತೆ, ಸೆಕೆಂಡ್ ಹ್ಯಾಂಡ್ ಸಂತೆ ಹೀಗೆ ಎಲ್ಲಾ ರೀತಿಯ ಮಾರುಕಟ್ಟೆಗಳು ಅಲ್ಲೂ ಇವೆ. ಅ ಮಾರುಕಟ್ಟೆ ಮುಗಿಯುವ ವೇಳೆಗೆ ಗಲೀಜು ಮಯವಾಗಿರುತ್ತದೆ. ಆದರೆ ಮಾರು ಕಟ್ಟೆ ಮುಗಿದ ಒಂದು ತಾಸಿನಲ್ಲಿ ಅಲ್ಲಿ ಮಾರುಕಟ್ಟೆಯಿತ್ತು ಎಂದು ಹೇಳಲು ಆಗದಷ್ಟರ ಮಟ್ಟಿಗೆ ಪೌರ ಕಾರ್ಮಿಕರು ಸ್ವಚ್ಛಗೊಳಿಸಿ ಹೋಗುತ್ತಾರೆ. ಇನ್ನು ಜಪಾನಿನ ಕಥೆ ಬೇರೆ ಮಟ್ಟದ್ದು! ಅಲ್ಲೂ ನಿಮಗೆ ರಸ್ತೆಯಲ್ಲಿ ಕಸದ ಬುಟ್ಟಿ ಕಾಣುವುದೇ ಇಲ್ಲ! ಹೌದು ನಗರದಲ್ಲಿ ಕಸದ ಬುಟ್ಟಿಗಳೇ ಇಲ್ಲ. ಪ್ರವಾಸಿಗರು ಕೂಡ ತಮ್ಮ ಕಸವನ್ನು ತಾವೇ ಕವರಿನಲ್ಲಿ ಹಾಕಿಕೊಂಡು ಬ್ಯಾಗಿನಲ್ಲಿ ಇಟ್ಟುಕೊಂಡು ಹೋಗಬೇಕು. ತಮ್ಮ ಹೋಟೆಲ್ ಅಥವಾ ಎಲ್ಲಿ ಉಳಿದುಕೊಂಡಿರುತ್ತಾರೆ ಅಲ್ಲಿರುವ ಕಸದ ಬುಟ್ಟಿಯಲ್ಲಿ ಹಾಕಬೇಕು.

ಜನ ಸಾಮಾನ್ಯ ಜಗತ್ತಿನೆಡೆ ಸೇಮ್ ಕಣ್ರೀ. ಅವನಿಗೆ ಲೋಕಜ್ಞಾನ ಕಡಿಮೆ. ಗಲೀಜು ಮಾಡುವುದು, ಅನ್ನಿಸಿದ್ದು ತಕ್ಷಣ ಹೇಳುವುದು, ಮಾಡುವುದು, ಹೆಚ್ಚು ಚಿಂತಿಸದೆ ತನ್ನ ಸ್ವಸುಖಕ್ಕೆ ಮಾತ್ರ ಪ್ರಾಮುಖ್ಯತೆ ಕೊಡುವುದು ಸಾಮಾನ್ಯ, ಸಹಜ. ಆದರೆ ಒಂದು ವ್ಯವಸ್ಥೆ, ಭದ್ರವಾದ ವ್ಯವಸ್ಥೆ ಕಟ್ಟಿರುವ ಕಾರಣ ಮತ್ತು ವ್ಯವಸ್ಥೆ ಮುರಿದರೆ ಬೀಳುವ ದಂಡದ ಭಯದ ಕಾರಣ ವ್ಯವಸ್ಥೆಯನ್ನು ಅವರು ಮುರಿಯುವುದಿಲ್ಲ, ಇದರ ಜೊತೆಗೆ ಸಮಾಜದಲ್ಲಿ ಸೃಷ್ಟಿಯಾಗುವ ಗಲೀಜನ್ನು ಸ್ವಚ್ಛ ಗೊಳಿಸುವ ವ್ಯವಸ್ಥೆ ಚೆನ್ನಾಗಿ ಮಾಡಿದ್ದಾರೆ. ಅಲ್ಲಿನ ಪೌರ ಕಾರ್ಮಿಕರು ಎಂಟು ತಾಸು ಎಂದರೆ ಎಂಟು ತಾಸು ಕಸ ಗುಡಿಸುತ್ತಾರೆ. ರಸ್ತೆಯನ್ನು ಸ್ವಚ್ಛಗೊಳಿಸುತ್ತಲೇ ಇರುತ್ತಾರೆ. ನಮ್ಮಲ್ಲಿ? ಬೆಳಗಿನ ಒಂದೆರಡು ತಾಸಿನ ನಂತರ ಅವರು ಕಣ್ಣಿಗೆ ಬೀಳುವುದೇ ಇಲ್ಲ. ಅದೆಷ್ಟೋ ಬಡಾವಣೆಗಳಲ್ಲಿ ದಿನದಲ್ಲಿ ಒಂದೆರಡು ತಾಸು ಅವರನ್ನು ನೋಡುವ ಪುಣ್ಯವೂ ಇಲ್ಲ.

ರಸ್ತೆಯ ಇಕ್ಕೆಲಗಳಲ್ಲಿ ಹಳೆ ಮನೆ ಕೆಡವಿದ ಇಟ್ಟಿಗೆಗಳು, ಕೋಳಿ ಫಾರ್ಮ್‌ನ ಸತ್ತ ಕೋಳಿಗಳು, ಪುಕ್ಕಗಳು, ಮನೆಯಿಂದ ಸಂಗ್ರಹಿಸಿ ತೆಗೆದುಕೊಂಡು ಹೋದ ಕಸ ಇತ್ಯಾದಿಗಳನ್ನು ಸುರಿದು ಹೋಗುತ್ತಾರೆ. ಯಾರಿಗೂ ಏನೂ ಅನ್ನಿಸುವುದೇ ಇಲ್ಲ. ಎಲ್ಲರಿಗೂ ಅವರವರ ಬದುಕನ್ನು ಕಟ್ಟಿ ಕೊಳ್ಳುವ ಧಾವಂತ. ಹೋರಾಡೋಣ ಎಂದರೆ ಯಾರ ವಿರುದ್ಧ ಹೋರಾಡುವುದು? ಕಸದ ಮಾಫಿಯಾ, ಧಮಕಿ ಜೊತೆಗೆ ನಮ್ಮ ಸಮಾಜದಲ್ಲಿನ ನಾಗರಿಕರ ನಿನಗ್ಯಾಕೆ ಬೇಕು ಇಲ್ಲದ ಉಸಾಬರಿ? ಎನ್ನುವ ಸಲಹೆಗಳು ಹೋರಾಡುವ ಮನಸ್ಸಿದ್ದವರನ್ನು ಸುಮ್ಮನಾಗಿಸಿ ಬಿಡುತ್ತದೆ.

ಇದು ಒಬ್ಬ ನಾಗರಿಕನ ಕೆಲಸವಲ್ಲ, ಇದು ಸಂಘಟಿತರಾಗಿ ನಾವೆಲ್ಲರೂ ಮಾಡುವ, ಮಾಡಬೇಕಾದ ಕೆಲಸ. ಸೋಶಿಯಲ್ ಮೀಡಿಯಾದಲ್ಲಿ ಅಬ್ಬರಿಸಲು ನಮಗೆ ವೇಳೆ ಇರುತ್ತೆ. ಇಂತಹ ಸಂಘಟನೆಯಲ್ಲಿ ಪಾಲ್ಗೊಳ್ಳಲು ಸಮಯವೇ ಇರುವುದಿಲ್ಲ. ಎಲ್ಲರಿಗೂ ಸ್ವಚ್ಛ, ಶುಚಿಯಾದ ಸಮಾಜ ಬೇಕು. ಸ್ವಚ್ಛ ಭಾರತ ಅಭಿಯಾನ ಎಂದ ತಕ್ಷಣ ಅದೊಂದು ಗಿಮಿಕ್ ಎನ್ನುತ್ತೇವೆ. ಸ್ವಚ್ಛತೆ ಎನ್ನುವುದು ಜೀವನಶೈಲಿ ಆಗಬೇಕು. ಅದು ತೋರ್ಪಡಿಕೆಗೆ ಎರಡು ದಿನ ಮಾಡುವ ವಿಚಾರವಲ್ಲ.

ನಾರ್ಡಿಕ್ ದೇಶಗಳಾದ ಸ್ವೀಡನ್, ಡೆನ್ಮಾರ್ಕ್, ಫಿನ್ಲ್ಯಾಂಡ್ ದೇಶಗಳಲ್ಲಿ ಕಸವನ್ನು ಬಳಸಿಕೊಂಡು ಅದರಿಂದ ವಿದ್ಯುತ್ ಉತ್ಪಾದನೆ ಮಾಡುತ್ತಾರೆ. ಯಾವುದೆ ಪುನರ್‌ಬಳಕೆ ಮಾಡಿಕೊಳ್ಳಬಹುದು ಅವೆಲ್ಲವನ್ನೂ ಪುನರ್ ಬಳಕೆಗೆ ಯೋಗ್ಯವಾಗುವಂತೆ ಬದಲಿಸುವ ರಿಸೈಕಲ್ ಯೂನಿಟ್‌ಗಳಿವೆ. ದೊಡ್ಡ ದೊಡ್ಡ ಮಾಲುಗಳಲ್ಲಿ ಬಾಟಲ್, ಪ್ಲಾಸ್ಟಿಕ್, ಬ್ಯಾಟರಿ ಮತ್ತಿತರ ತ್ಯಾಜ್ಯಗಳನ್ನು ನಿಗದಿತ ಸ್ಥಳದಲ್ಲಿ ಡೆಪಾಸಿಟ್ ಮಾಡಿದರೆ ಒಂದಷ್ಟು ಹಣವನ್ನು ಕೊಡುತ್ತಾರೆ.

ಅಂತಹ ಕೆಲಸವನ್ನು ಇಲ್ಲೂ ಮಾಡಬೇಕು. ಆಯಾ ನಗರದ ದೊಡ್ಡ ಉದ್ಯಮಿಗಳು ಮತ್ತು ಕಾರ್ಪೊರೇಶನ್ ಅಧಿಕಾರಿಗಳು ಕುಳಿತು ಚರ್ಚಿಸಿ ಸಂಸ್ಕರಣಾ ಘಟಕಗಳನ್ನು ತೆರೆಯಬೇಕು. ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ರಸ್ತೆಯ ಎರಡೂ ಬದಿಯಲ್ಲಿ ಬಿದ್ದಿರುವುದು ಕೇವಲ ಕಸವಲ್ಲ, ಅದು ಹಣ. ಸರಿಯಾಗಿ ಅದನ್ನು ಬಳಸಿಕೊಂಡರೆ ವರ್ಷದಲ್ಲಿ ಕೋಟಿ ಗಟ್ಟಲೆ ಹಣವನ್ನು ಸಂಪಾದಿಸಬಹುದು.

ಏನೂ ಮಾಡದೆ ನಾವು ಕೋಟಿಗಟ್ಟಲೆ ಸಂಪಾದಿಸುತ್ತಿದ್ದೇವೆ ಎನ್ನುವ ಅಧಿಕಾರಿಗಳು, ಮನಸ್ಥಿತಿ ಬದಲಾಗದ ಹೊರತು ಭಾರತ ಸ್ವಚ್ಛವಾಗುವುದಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಸ್ವಚ್ಛತೆ ಬಗ್ಗೆ ಅಭಿಯಾನ ಶುರುವಾಗಬೇಕು. ಗಲೀಜು ಎಂದರೆ ಅದೊಂದು ಅಪರಾಧ ಎನ್ನುವ ಭಾವನೆ ಸಮಾಜದಲ್ಲಿ ಬರಬೇಕು. ಮಕ್ಕಳ ಮನಸ್ಸಿನಲ್ಲಿ ನಾನು, ನನ್ನೂರು, ನನ್ನ ರಾಜ್ಯ, ನನ್ನ ದೇಶ ಎನ್ನುವ ಸ್ವಾಭಿಮಾನ, ಹೆಮ್ಮೆ ಹುಟ್ಟಿಸುವ ಕೆಲಸವಾಗಬೇಕು. ಸರಕಾರ ಸ್ವಚ್ಛತೆಯನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು.

ಸ್ವಚ್ಛತೆ ಕಾಪಾಡಲು ಹೆಚ್ಚು ಪೌರ ಕಾರ್ಮಿಕರನ್ನು ನೇಮಿಸಬೇಕು. ಅವರು ಸರಿಯಾಗಿ ಕೆಲಸ ಮಾಡುತ್ತಿರುವುದಕ್ಕೆ ಹೊಣೆಗಾರಿಕೆ ವಿಧಿಸಬೇಕು. ಹಾಗೆ ನಾಗರಿಕರು ಕೂಡ ಗಲೀಜು ಮಾಡದಂತೆ ಎಚ್ಚರಿಕೆಯನ್ನು ವಿಧಿಸಬೇಕು. ತಪ್ಪಿದ್ದಲ್ಲಿ ಅದಕ್ಕೆ ದಂಡವನ್ನು ವಿಧಿಸಬೇಕು. ಸೋಶಿಯಲ್ ಪಾಯಿಂಟ್ ಸಿಸ್ಟಮ್ ತರಬೇಕು. ಯಾರು ಹೆಚ್ಚು ನಿಯಮವನ್ನು ಮುರಿಯುತ್ತಾರೆ ಅಂತಹವರಿಗೆ ಸಾಮಾಜಿಕ ಛೀಮಾರಿ ಹಾಕುವ ವ್ಯವಸ್ಥೆ ತರಬೇಕು. ಅಂತಹವರಿಂದ ಕಸ ಗುಡಿಸುವ, ಸ್ವಚ್ಛಗೊಳಿಸುವ ಕೆಲಸವನ್ನು ಮಾಡಿಸಬೇಕು. ಕಾರಿನಿಂದ, ಬಸ್ಸಿನಿಂದ ಉಗಿಯುವುದು, ರಸ್ತೆಯಲ್ಲಿ ಉಗಿಯುವುದು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಬೇಕು.

ರಸ್ತೆಯಲ್ಲಿ ಹಸು, ಎಮ್ಮೆ, ನಾಯಿ ಓಡಾಡದಂತೆ ಕಾನೂನು ತರಬೇಕು. ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವುದು, ಅ ಬದುಕುವುದು ತಪ್ಪು ಎನ್ನಬೇಕು. ನಗರದ ಸ್ವಚ್ಛತೆ ಎನ್ನುವುದು ಕೇವಲ ಸರಕಾರದ ಕೆಲಸ ಮಾತ್ರವಲ್ಲ, ನಾಗರಿಕರ ಕೆಲಸವೂ ಹೌದು. ಆದರೆ ಓಡಾಟಕ್ಕೆ ಎಂದು ಇರುವ ರಸ್ತೆಯಲ್ಲಿ ಬಹಳ ವರ್ಷದಿಂದ ವ್ಯಾಪಾರ ಮಾಡುತ್ತಾ ಬದುಕು ಕಟ್ಟಿಕೊಂಡಿರೆ ಎಂದು ಅವರನ್ನು ಅಲ್ಲಿಂದ ಖಾಲಿ ಮಾಡಿಸಿ, ಓಡಾಟಕ್ಕೆ ಅನುಕೂಲ ಮಾಡಿಕೊಡುವುದರ ಬಗ್ಗೆಯೂ ಡಿಬೇಟ್ ಮಾಡುವ ನಮ್ಮ ಸಮಾಜದಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ?

- ರಂಗಸ್ವಾಮಿ ಎಂ

ಅನ್ನ ಉಳ್ಳವನೇ ಶ್ರೇಷ್ಟವಂತ

ಒಂದು ಪ್ರವಚನದಲ್ಲಿ ಪೂಜ್ಯ ಸಿದ್ದೇಶ್ವರ ಸ್ವಾಮೀಜಿ ಅವರು ಹೇಳಿದ ಕಥೆ. ಒಬ್ಬ ರಾಜ ಇದ್ದನು. ಆತನಿಗೆ ಒಂದು ಅಭಿಮಾನವಿತ್ತು. ನನ್ನಷ್ಟು ಸಂಪತ್ತು ಯಾರು ಮಾಡಿಲ್ಲ, ಹಾಗಾಗಿ ನಾನು ಜಗತ್ತಿನಲ್ಲಿ ಶ್ರೇಷ್ಠ ಮನುಷ್ಯ ಅನ್ನುವ ಅಭಿಮಾನ ಇತ್ತು. ಒಂದು ದಿನ ಮಲಗಿದ್ದನು. ಮಲಗಿದಾಗ ಒಂದು ಕನಸು ಬಿತ್ತು. ಕನಸಿನಲ್ಲಿ ರಾಜ್ಯದ ಅಕ್ಕಪಕ್ಕದ ನಾಲ್ಕು ರಾಜರು ಕೂಡಿ ಈ ರಾಜನ ಮೇಲೆ ದಾಳಿ ಮಾಡಿದರು. ಈ ರಾಜನನ್ನು ಸೋಲಿಸಿಬಿಟ್ಟರು. ಸಂಪತ್ತನ್ನೆಲ್ಲ ದೋಚಿದರು. ಮೈ ಮೇಲಿನ ಬಟ್ಟೆ, ಒಡವೆ ಎಲ್ಲವನ್ನು ಕಿತ್ತುಕೊಂಡರು. ಆ ಬಳಿಕ ಹರಿದ ಬಟ್ಟೆ ಕೊಟ್ಟು ರಾಜ್ಯದಿಂದ ಹೊರದಬ್ಬಿದರು. ಹೊಟ್ಟೆ ಹಸಿದಿತ್ತು. ನೀರಡಿಕೆಯಾಗಿತ್ತು. ರಾಜ್ಯ ಹೋಗಿತ್ತು. ಹೀಗೆ ನಡೆದುಕೊಂಡು ಹೋಗುತ್ತಾ ಇದ್ದನು. ನೋಡಿ ಕೊಂಡ, ಮೈಯಲ್ಲಿ ಏನೂ ಉಳಿದಿರಲಿಲ್ಲ. ಆತನ ದೇಹದ ಪ್ರತಿ ಜೀವಕೋಶ ಅನ್ನ, ನೀರು ಬಯಸುತ್ತಿತ್ತು. ಅಷ್ಟು ಹಸಿವು ದಾಹವಾಗಿತ್ತು. ಹೋಗುತ್ತಿರಬೇಕಾದರೆ ಒಬ್ಬ ಬಡವ ಸಿಕ್ಕಿದ. ಆತ ದನ ಕಾಯೋ ಮನುಷ್ಯ. ಆತನ ಹತ್ತಿರ ಒಂದು ತತ್ರಾಣಿಗೆ ಇತ್ತು. ಅವನ ಬಳಿ ಒಂದು ಬುತ್ತಿ ಇತ್ತು. ಆತ ಬುತ್ತಿ ಬಿಚ

ಕೆಎಸ್‌ಆರ್‌ಟಿಸಿ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ಅಕ್ರಮ ಆರೋಪ

ಪಾರದರ್ಶಕ ತನಿಖೆ ಮೂಲಕ ನೊಂದವರಿಗೆ ನ್ಯಾಯ ಒದಗಿಸಲು ಒತ್ತಾಯ

• ಪ್ರಜೋದಯ ವರದಿ

ಹಾಸನ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಕಳೆದ 15 ವರ್ಷದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಪಾರದರ್ಶಕ ತನಿಖೆ ಮೂಲಕ ನೊಂದವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸಂಘದ ಕಾರ್ಯಾಧ್ಯಕ್ಷ ಜಿ.ಟಿ.ರಂಗೇಗೌಡ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಸಹಕಾರ ಇಲಾಖೆಯ ಕಲಂ 64ರ ಅಡಿ ತನಿಖೆ ನಡೆಸಿದರೆ ಮಾಜಿ ಅಧ್ಯಕ್ಷ ಹೊನ್ನೇಗೌಡ ಅವರ ಕರ್ಮಕಾಂಡ ಬಯಲಿಗೆ ಬರುತ್ತದೆ. ನೌಕರರಿಗೆ ಮನೆ ನಿರ್ಮಿಸಿಕೊಡುವ ಉದ್ದೇಶದಿಂದ 1980ರ ದಶಕದಲ್ಲಿ ಸಹಕಾರ ಸಂಘ ಸ್ಥಾಪನೆಯಾಗಿ ಉತ್ತಮ ಕಾರ್ಯಗಳ ಮೂಲಕ ಹೆಸರು ಗಳಿಸಿತ್ತು ಎಂದು ಹೇಳಿದರು.

ಆದರೆ, ಹಿಂದಿನ ಅವಧಿಯ ಅಧ್ಯಕ್ಷ ಹೊನ್ನೇಗೌಡ ಅವರು ವ್ಯಾಪಕ ಭ್ರಷ್ಟಾಚಾರ ನಡೆಸಿದ್ದಾರೆ. ಬಿ.ಕಾಟೀಹಳ್ಳಿ ಗದ್ದೆ ಬಯಲಿನಲ್ಲಿ 11 ಎಕರೆ ಜಮೀನಿಗೆ ಕ್ರಯದ ಕರಾರು ಒಪ್ಪಂದ ಮಾಡಿಕೊಂಡು 50 ಎಕರೆ ಖರೀದಿಸುವುದಾಗಿ ಸದಸ್ಯರನ್ನು ನಂಬಿಸಿ 5 ಲಕ್ಷ ರೂ.ನಂತೆ 10 ಕೋಟಿ ರೂ.ಗೂ ಅಧಿಕ ಮೊತ್ತ ಸಂಗ್ರಹಿಸಲಾಗಿದೆ. ಜಮೀನನ್ನು ಸಂಘದ ವತಿಯಿಂದ ನೇರವಾಗಿ ಖರೀದಿಸಬೇಕೆಂಬ ನಿಯಮವಿದ್ದರೂ ಕಾನೂನು ಬಾಹಿರವಾಗಿ 16 ಲಕ್ಷ ರೂ. ಗಳನ್ನು ಮಧ್ಯವರ್ತಿಗಳ ಮೂಲಕ ಪಾವತಿಸಿದ್ದಾರೆ. ವಕೀಲರ ಶುಲ್ಕವೆಂದು 72.50 ಲ.ರೂ. ನೀಡಿದ್ದಾರೆ. ಮಣ್ಣು ತುಂಬಿಸುವ ಕಾಮಗಾರಿ ಹೆಸರಿನಲ್ಲಿ 78 ಲಕ್ಷ ರೂ., ಸಿ.ಡಿ. ದಿವಾಕರ್ ಎಂಬುವವರಿಗೆ 37 ಲಕ್ಷ ರೂ., ಸುರೇಂದ್ರ ಎಂಬುವವರಿಗೆ 15 ಮತ್ತು ಸರ್ವೇಗೆಂದು 16 ಲಕ್ಷ ರೂ. ಡ್ರಾ ಮಾಡಿ ದುರ್ಬಳಕೆ ಮಾಡಲಾಗಿದೆ ಎಂದು ಆರೋಪಿಸಿದರು.

ಇಷ್ಟೆಲ್ಲ ಆದರೂ ಲೇಔಟ್ ಕಾಮಗಾರಿ ಪೂರ್ಣಗೊಂಡಿಲ್ಲ. ರಸ್ತೆ, ಕುಡಿಯುವ ನೀರು, ಬೀದಿ ದೀಪ ಮೂಲಸೌಕರ್ಯ ಕಾರ್ಯ ಪೂರ್ಣಗೊಂಡಿಲ್ಲ. ಆದರೂ 10.98 ಕೋಟಿ ರೂ. ಮೊತ್ತಕ್ಕೆ ಮಂಜೂರಾಗಿದ್ದ ಲೇಔಟ್ ಅಭಿವೃದ್ಧಿಗೆ 21.48 ಕೋಟಿ ರೂ. ಪಾವತಿಸಲಾಗಿದೆ. ಅದಕ್ಕೆ ಯಾರ ಅನುಮೋದನೆ ಪಡೆದಿಲ್ಲವೆಂದು ಆಪಾದಿಸಿದರು.

ದೇವಾಲಯ ಪೂಜೆ, ವಿವಿಧ ಕಾಮಗಾರಿಗಳ ಹೆಸರಿನಲ್ಲೂ ನಿಯಮ ಉಲ್ಲಂಘಿಸಿ ಲಕ್ಷಾಂತರ ರೂ. ವೆಚ್ಚ ಮಾಡಲಾಗಿದೆ. ಸಂಘದ ಹೆಸರಿನಲ್ಲಿ ಠೇವಣಿ ಇಟ್ಟಿದ್ದ 56.40 ಲ.ರೂ.ಗಳನ್ನು ಆಡಳಿತ ಮಂಡಳಿ ಅನುಮತಿ ಪಡೆಯದೇ ಸೃಷ್ಟಿ ಡೆವಲಪರ್ ಖಾತೆಗೆ ವರ್ಗಾವಣೆ ಮಾಡಲಾಗಿದೆ. ಈ ಸಂಬಂಧ 2025ರಲ್ಲಿ ಬಡಾವಣೆ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಅವರು ತಿಳಿಸಿದರು.

ಸಂಘದ ಅಧ್ಯಕ್ಷ ದೇವರಾಜು ಅವರು ಮಾತನಾಡಿ, ಹತ್ತಾರು ನಿವೇಶನಗಳನ್ನು ಹೊನ್ನೇಗೌಡ ತಮ್ಮ ಕುಟುಂಬದವರಿಗೆ ಮಾಡಿಕೊಂಡಿದ್ದಾರೆ. ಈ ಎಲ್ಲಾ ಅಕ್ರಮ ಕುರಿತು ಮುಖ್ಯಮಂತ್ರಿ, ಸಹಕಾರ ಇಲಾಖೆ ಜಂಟಿ ನಿರ್ದೇಶಕರು, ಲೆಕ್ಕಪರಿಶೋಧನಾ ನಿರ್ದೇಶಕರು ಸೇರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ದೂರು ಸಲ್ಲಿಸಿದ್ದರೂ ತನಿಖೆ ಆರಂಭವಾಗಿಲ್ಲ. ಹಿಂದಿನ ಅಧಿಕಾರಿಗಳೂ ಅಕ್ರಮಕ್ಕೆ ಕೈ ಜೋಡಿಸಿದ್ದಾರೆಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಶಿವನಂಜೇಗೌಡ, ರಂಗಶೆಟ್ಟಿ, ಮೊಗಣ್ಣ, ತಿಮ್ಮೇಗೌಡ, ಮೊಗಯ್ಯ ನಾಯಕ್, ಕೃಷ್ಣೇಗೌಡ, ನಾಗೇಶ್, ಅನಿತಾ, ಕುಮಾರ್ ಹಾಜರಿದ್ದರು.

ಆಗಸ್ಟ್ 15 ರೊಳಗೆ ಗ್ರಾಮ ಪಂ.ಗಳಿಗೆ ಮಹಾತ್ಮಾಗಾಂಧಿ ಹೆಸರು

• ಪ್ರಜೋದಯ ವರದಿ

ಬೆಂಗಳೂರು: ಆಗಸ್ಟ್ 15ರ ಸ್ವಾತಂತ್ರ್ಯ ದಿನದೊಳಗೆ ರಾಜ್ಯದ ಎಲ್ಲ 5927 ಗ್ರಾಮ ಪಂಚಾಯ್ತಿಗಳಿಗೆ ಮಹಾತ್ಮಾ ಗಾಂಧಿ ಪಂಚಾಯತಿ ಎಂದು ನಾಮಕರಣ ಮಾಡಲು ಗಡುವು ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಇಲಾಖೆಯ ಆಯುಕ್ತಾಲಯದಲ್ಲಿ ಸೋಮವಾರ ಪಿಡಿಓ, ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕರ ವರ್ಗಾವಣೆ ಕೌನ್ಸಲಿಂಗ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಷ್ಟ್ರಪಿತ ಮಹಾತ್ಮಾಗಾಂಧಿ ಹೆಸರನ್ನು ಚಿರಸ್ಥಾಯಿಗೊಳಿಸಲು 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 279ರಲ್ಲಿ ಘೋಷಣೆ ಮಾಡಿರುವಂತೆ ಎಲ್ಲ ಪಂಚಾಯ್ತಿಗಳ ಹೆಸರು ಬದಲಾವಣೆ ಮಾಡಲು ಸ್ಪಷ್ಟ ಸೂಚನೆ ನೀಡಲಾಗಿದೆ ಎಂದರು.

ಉತ್ತಮ ಮಳೆಗಾಗಿ ವಿಶೇಷ ಪೂಜೆ

• ಪ್ರಜೋದಯ ವರದಿ

ಪಾರ್ವತಮ್ಮನ ಮೊರೆ ಹೋದ ಶಾಸಕ ಸಿಮೆಂಟ್ ಮಂಜು

ಆಲೂರು: ಮಲೆನಾಡು ಭಾಗದಲ್ಲಿ ವಾಡಿಕೆಗಿಂತ ಮಳೆ ಕೊರತೆಯಾಗಿರುವ ಹಿನ್ನೆಲೆಯಲಿ, ಶಾಸಕ ಸಿಮೆಂಟ್ ಮಂಜು ಅವರು ಕೆ.ಹೊಸಕೋಟೆ ಹೋಬಳಿ ದೈತಾಪುರ ಗ್ರಾಮದಲ್ಲಿರುವ ಶ್ರೀ ಪಾರ್ವತಮ್ಮನವರ ಬೆಟ್ಟಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಉತ್ತಮ ಮಳೆಗಾಗಿ ಪ್ರಾರ್ಥಿಸಿದರು.

ನಂತರ ಮಾತನಾಡಿದ ಅವರು, ಈ ಭಾಗದಲ್ಲಿ ಈ ವೇಳೆಗೆ 488 ಮಿ.ಮೀ. ಮಳೆ ದಾಖಲಾಗಬೇಕಾಗಿದ್ದರೂ, ಇದುವರೆಗೆ ಕೇವಲ 355 ಮಿ.ಮೀ. ಮಳೆ ಸುರಿದಿದೆ. ಶೇ. 27ಕ್ಕೂ ಅಧಿಕ ಮಳೆ ಕೊರತೆ ಉಂಟಾಗಿದೆ.

ಆದರೆ ಕಳೆದ ಒಂದು ವಾರದಿಂದ ಮುಂಗಾರು ಕೈಕೊಟ್ಟಿರುವುದರಿಂದ ಮುಂದಿನ ದಿನಗಳಲ್ಲಿ ವಾಡಿಕೆಯಷ್ಟು ಮಳೆ ಸುರಿಯದ ಆತಂಕ ಎದುರಾಗಿದೆ. ಇದರ ಪರಿಣಾಮ ಕೃಷಿ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದ್ದು ರೈತರಲ್ಲಿ ಆತಂಕ ಮನೆ ಮಾಡಿದೆ ಎಂದು ಹೇಳಿದರು.

ಮಲೆನಾಡಿನ ರೈತರ ಬದುಕು ಸಂಪೂರ್ಣವಾಗಿ ಮಳೆಯನ್ನೆ ಅವಲಂಬಿಸಿರುವುದರಿಂದ ಸಮರ್ಪಕ ಮಳೆಯಾದರೆ ಮಾತ್ರ ಉತ್ತಮ ಫಸಲು ಬೆಳೆಯಲು ಸಾಧ್ಯ. ಇದೇ ಕಾರಣದಿಂದ ತಾಯಿ ಪಾರ್ವತಮ್ಮನವರ ಸನ್ನಿಧಿಯಲ್ಲಿ ರೈತರ ಕಲ್ಯಾಣ, ಸಮೃದ್ಧ ಮಳೆ, ಉತ್ತಮ ಬೆಳೆ ಹಾಗೂ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯಲಿ ಎಂಬ ಸಂಕಲ್ಪದೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ ದೇಶದ ಎಲ್ಲಾ ಕಡೆಯೂ ಹವಾಮಾನದಲ್ಲಿ ವೈಪರೀತ್ಯವಾಗುತ್ತಿದ್ದು, ಸರಿಯಾದ ಸಮಯಕ್ಕೆ ಮಳೆಯಾಗುತ್ತಿಲ್ಲ. ಇದಕ್ಕೆ ಮನುಷ್ಯನ ದುರಾಸೆಯೇ ಕಾರಣ ಎನ್ನಬಹುದು. ಹಾಗಾಗಿ ಮುಂದಿನ ದಿನಗಳಲ್ಲಿ ಹೆಚ್ಚೆಚ್ಚು ಮರ-ಗಿಡಗಳನ್ನು ಬೆಳೆಸುವ ಮೂಲಕ ಉತ್ತಮ ಪರಿಸರ ನಿರ್ಮಿಸಲು ನೆರವಾಗಬೇಕು ಎಂದು ಹೇಳಿದರು.

ತಾಯಿ ಪಾರ್ವತಮ್ಮನವರ ಕೃಪೆಯಿಂದಾಗಿ ಮುಂದಿನ ದಿನಗಳಲ್ಲಿ ಮಲೆನಾಡು ಸೇರಿದಂತೆ ರಾಜ್ಯದೆಲ್ಲೆಡೆ ಸಮೃದ್ಧ ಮಳೆಯಾಗಿ ರೈತರ ಬದುಕು ಹಸನಾಗಲಿ ಎಂದು ಮಂಜು ಅವರು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಮಂಡಲ ಅಧ್ಯಕ್ಷೆ ಉಮಾ ರವಿಕುಮಾರ್, ದೇವಸ್ಥಾನ ಸಮಿತಿ ಅಧ್ಯಕ್ಷ ರವಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ರಾಜ್‌ಕುಮಾರ್, ಮುಖಂಡರಾದ ಜಯಂತಿ, ನಂದಿನಿ ವಿಶ್ವನಾಥ್, ಪೂವಯ್ಯ, ಸಿದ್ದೇಶ್, ಮಲ್ಲಿಕಾರ್ಜುನ, ಚಂದ್ರಕಾಂತ್, ಚೇತನ್, ಸಂಪತ್ ಅಬ್ಬನ ಸೇರಿದಂತೆ ಇನ್ನಿತರರು ಇದ್ದರು.

ಜೆಸಿಐ ಹಾಸನ ಹೇಮಾವತಿ ವಲಯ ಉದ್ಘಾಟನೆ

• ಪ್ರಜೋದಯ ವರದಿ

ಹಾಸನ: ಜೆಸಿಐ ಹಾಸನ ಹೇಮಾವತಿ ವಲಯ 14ರ ಉದ್ಘಾಟನಾ ಸಮಾರಂಭ ನಗರದ ಕ್ಷೀರ ಸಮುದಾಯ ಭವನದಲ್ಲಿ ಇತ್ತೀಚೆಗೆ ನೆರವೇರಿತು.

ಜೆಸಿಐ ರಾಷ್ಟ್ರೀಯ ಉಪಾಧ್ಯಕ್ಷ ಜೆ.ಸಿ.ಜಿತೇಶ್ ಅದ್ವಾನಿ ಅವರು ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಲಯ ಅಧ್ಯಕ್ಷ ಪ್ರಜ್ವಲ್ ಎಸ್.ಜೈನ್ ಅವರು ಹಾಸನ ಹೇಮಾವತಿ ವಲಯ ನೂತನ ಅಧ್ಯಕ್ಷ ವಿಮಲ್ ರಾಜ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಪತ್ರಕರ್ತ ಕೆಪಿಎಸ್ ಪ್ರಮೋದ್, ಕುಶಾಲನಗರ ಕಾವೇರಿ ಜೆಸಿಐ ಅಧ್ಯಕ್ಷ ಎಂ. ಶ್ರೀನಿವಾಸ್, ಜೆ.ಸಿ.ಉಮಾಮಹೇಶ್, ಹೇಮಾವತಿ ಮಾತನಾಡಿದರು.

ನೂತನ ಸದಸ್ಯರಾಗಿ ಪ್ರದೀಪ್, ತ್ಯಾಗರಾಜು, ಕೆ.ಸತೀಶ್, ಬಿ.ವಿ. ಸುಜಯ್ ಕುಮಾರ್, ಕೆ.ವಿ.ಗುರು ಪ್ರಸಾದ್ ಕಾಮತ್, ಹೆಚ್.ವಿ. ವಿಕಾಸ್, ಎಸ್.ಸುನಿಲ್ ಕುಮಾರ್ ಮತ್ತಿತರರಿದ್ದರು.

ಇಂದಿನಿಂದ ಬಿಳಿಸುಳಿ ರೋಗ ಬಾಧೆ ಜಂಟಿ ಸಮೀಕ್ಷೆ

ಜಿಲ್ಲಾಧಿಕಾರಿ ಆದೇಶ: ಒಂದು ವಾರದೊಳಗೆ ವರದಿ ಸಲ್ಲಿಸಲು ಸೂಚನೆ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ಜೋಳದ ಬೆಳೆಯಲ್ಲಿ ಕಾಣಿಸಿಕೊಂಡಿರುವ ಬಿಳಿಸುಳಿ ರೋಗ ವ್ಯಾಪಿಸಿರುವ ಬಗ್ಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತುರ್ತು ಸಭೆ ನಡೆಸಿ ಸಮಗ್ರ ಜಂಟಿ ಸಮೀಕ್ಷೆಗೆ ಆದೇಶ ನೀಡಿದ್ದಾರೆ. ಈ ಹಿನ್ನಲೆ ಬುಧವಾರದಿಂದಲೇ ಸಮೀಕ್ಷೆ ಕಾರ್ಯ ಆರಂಭವಾಗಲಿದೆ.

ಕೃಷಿ ಇಲಾಖೆ, ತೋಟಗಾರಿಕೆ, ಕೃಷಿ ವಿಜ್ಞಾನಿಗಳು ಹಾಗು ರೈತ ಪ್ರತಿನಿಧಿಗಳನ್ನು ಒಳಗೊಂಡ ತಂಡವು ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಜೋಳದ ಬೆಳೆಯಲ್ಲಿ ರೋಗ ವ್ಯಾಪಿಸಿರುವ ವಿಸ್ತೀರ್ಣ, ಹಾನಿಯ ಪ್ರಮಾಣ ಮತ್ತು ಕಾರಣಗಳ ಕುರಿತು ಅಧ್ಯಯನ ನಡೆಸಲಿದೆ. ಈ ಸಮೀಕ್ಷೆಗೆ ಜಿಲ್ಲಾಧಿಕಾರಿ ಬುಧವಾರ ಬೆಳಿಗ್ಗೆ ಆಲೂರು ತಾಲ್ಲೂಕಿನಲ್ಲಿ ಚಾಲನೆ ನೀಡಲಿದ್ದು, ಬಿಳಿಸುಳಿ ರೋಗದಿಂದ ತೀವ್ರವಾಗಿ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಲಿದ್ದಾರೆ.

(71,588 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಬಿತ್ತನೆ)

ತಾಲ್ಲೂಕು	ಗುರಿ	ಬಿತ್ತನೆ (ಹೆಕ್ಟೇರ್)
ಆಲೂರು	9,210	12,450
ಅರಕಲಗೂಡು	22,523	15,506
ಅರಸೀಕೆರೆ	8,710	1,210
ಬೇಲೂರು	14,436	10,630
ಚನ್ನರಾಯಪಟ್ಟಣ	12,323	2,102
ಹಾಸನ	34,695	24,650
ಹೊಳೆನರಸೀಪುರ	11,822	5,040
ಒಟ್ಟು	1,13,719	71,588

ಜಿಲ್ಲೆಯಲ್ಲಿ ಬಿಳಿಸುಳಿ ರೋಗದ ವ್ಯಾಪ್ತಿ ಹಾಗು ಬೆಳೆ ಹಾನಿಯ ಪ್ರಮಾಣವನ್ನು ನಿಖರವಾಗಿ ಅಂದಾಜಿಸಲು ಜಿಲ್ಲಾಧಿಕಾರಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದೆ. ಎಷ್ಟು ಪ್ರದೇಶದಲ್ಲಿ ಬಿಳಿಸುಳಿ ರೋಗ ಕಾಣಿಸಿಕೊಂಡಿದೆ. ರೋಗದ ತೀವ್ರತೆ ಎಷ್ಟಿದೆ ಎಂಬ ಅಂಶಗಳ ಕುರಿತು ಅಧಿಕಾರಿಗಳ ತಂಡ ಮಾಹಿತಿ ಸಂಗ್ರಹಿಸಲಿದೆ.

ಸಮೀಕ್ಷೆಯ ವರದಿಯನ್ನು ಒಂದು ವಾರದೊಳಗೆ ಜಿಲ್ಲಾಡಳಿತಕ್ಕೆ ಸಲ್ಲಿಸಲು ಸೂಚಿಸಲಾಗಿದ್ದು, ಬಳಿಕ ಸರ್ಕಾರಕ್ಕೆ ಸಮಗ್ರ ವರದಿ ಕಳುಹಿಸಿ ಪರಿಹಾರ, ಬೆಳೆ ನಷ್ಟ ಪರಿಹಾರಧನ ಹಾಗು ಮುಂದಿನ ಕ್ರಮಗಳ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳು ಹೆಚ್ಚಾಗಿವೆ.

ಕಳೆದ ಕೆಲ ವರ್ಷಗಳಿಂದ ಜಿಲ್ಲೆಯ ರೈತರನ್ನು ಕಾಡುತ್ತಿರುವ ಬಿಳಿಸುಳಿ ರೋಗ ಈ ಬಾರಿ ಆತಂಕಕಾರಿ ಮಟ್ಟದಲ್ಲಿ ಹರಡುತ್ತಿದೆ. ಮಳೆ ಕೊರತೆಯಿಂದ ಈಗಾಗಲೇ ಸಂಕಷ್ಟದಲ್ಲಿದ್ದ ರೈತರಿಗೆ ಬಿಳಿಸುಳಿ ರೋಗ ಮತ್ತೊಂದು ದೊಡ್ಡ ಹೊಡೆತ ನೀಡಿದ್ದು, ಸಾವಿರಾರು ಎಕರೆ ಪ್ರದೇಶದ ಬೆಳೆ ಹಾನಿಯಾಗುವ ಭೀತಿ ಎದುರಾಗಿದೆ.

ತಂತ್ರಜ್ಞರ ಹುದ್ದೆ ಭರ್ತಿಗೆ ನೇರ ಸಂದರ್ಶನ

ಹಾಸನ: ಜಿಲ್ಲಾ ಆಸ್ಪತ್ರೆಯ ಸರ್ಕಾರಿ ರಕ್ತನಿಧಿ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಪ್ರಯೋಗ ಶಾಲಾ ತಂತ್ರಜ್ಞರ ಒಂದು ಹುದ್ದೆಗೆ ನೇರ ನೇಮಕಾತಿಗಾಗಿ ಜು.22 ರಂದು ಬೆಳಗ್ಗೆ 10.30 ಕ್ಕೆ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, 2ನೇ ಮಹಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಕಟ್ಟಡ, ಹಾಸನಾಂಬ ಒಳ ಕ್ರೀಡಾಂಗಣದ ಹತ್ತಿರ, ಸಾಲಗಾಮೆ ರಸ್ತೆ ಹಾಸನ ಇಲ್ಲಿ ಸಂದರ್ಶನ ನಡೆಯಲಿದೆ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕದ ಜಿಲ್ಲಾ ಏಡ್ಸ್ / ಕ್ಷಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ರಕ್ತನಿಧಿ ಪ್ರಯೋಗಶಾಲಾ ತಂತ್ರಜ್ಞರು ಅಂಗೀಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ ಸಂಸ್ಥೆಯಿಂದ ಈಖಡಿಖ ಅಥವಾ ಸಮಾನವಾದ ವಿದ್ಯಾರ್ಹತೆ (ಸಮನಾದ ವಿದ್ಯಾರ್ಹತೆ ಎಂದರೆ DMLT, BSC. MLT ಎಂದು ಅಥೈಸಿಕೊಳ್ಳುವುದು) ಮತ್ತು ಕಡ್ಡಾಯವಾಗಿ ವಿಜ್ಞಾನ ವಿಷಯದಲ್ಲಿ ಪದವಿ ಪೂರ್ವ ವಿದ್ಯಾರ್ಹತೆ (ಪಿ.ಯು.ಸಿ ತೇರ್ಗಡೆ ಹೊಂದಿರಬೇಕು) ಹಾಗೂ 2 ವರ್ಷ ರಕ್ತ ಕೇಂದ್ರದಲ್ಲಿ ಕೆಲಸ ಮಾಡಿದ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

ಸಂಚಿತ ಮೊತ್ತ ಮಾಸಿಕ ರೂ. 25000 (ಮಾರ್ಗ ಸೂಚಿಯನ್ವಯ ಪರಿಷ್ಕೃತಗೊಳಿಸುವಿಕೆ ಒಳಗೊಂಡಿರುತ್ತದೆ), ಸ್ಥಳೀಯರಿಗೆ ಆದ್ಯತೆ ಮೆರೆಗೆ ನೇಮಕ ಮಾಡುವುದು, ಕನ್ನಡ ಭಾಷಾ ಜ್ಞಾನ ಹೊಂದಿರತಕ್ಕದ್ದು, ಕಂಪ್ಯೂಟರ್ ಜ್ಞಾನ (ಇಂಟರ್‌ನೆಟ್ ಬ್ರೌಸಿಂಗ್, ಇ-ಮೇಲ್ ಎಂ.ಎಸ್. ಆಫೀಸ್‌ಗಳ) ಪರಿಣಿತಿ ಹೊಂದಿರಬೇಕು, ಮೆರಿಟ್ ಆಧಾರದ ಮೇಲೆ ನೇರ ಸಂದರ್ಶನದ ಅಂಕಗಳ ಮೂಲಕ ಆಯ್ಕೆ ಮಾಡಲಾಗುವುದು.

ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172250662, 94498 46976 ಗೆ ಸಂಪರ್ಕಿಸಬಹುದಾಗಿದೆ.

ಹನ್ಯಾಳು ಪ್ರೌಢಶಾಲಾ ಮಕ್ಕಳಿಂದ ಎಸ್‌ಐಆರ್ ಜಾಗೃತಿ

• ಪ್ರಜೋದಯ ವರದಿ

ಕೊಣನೂರು: ರಾಜ್ಯಾದ್ಯಂತ ನಡೆಯುತ್ತಿರುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ತಪ್ಪದೇ ಭಾಗಹಿಸಬೇಕೆಂದು ಅರಕಲಗೂಡು ತಾಲ್ಲೂಕು ಹನ್ಯಾಳು ದಿ. ಗೌರಮ್ಮ ಪುಟ್ಟಸ್ವಾಮಪ್ಪ ಸ್ಮಾರಕ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸಿದರು.

ಪ್ರೌಢಶಾಲಾ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಕೆ.ಎನ್.ರವಿಕುಮಾರ್ ಅವರು ಮಾತನಾಡಿ, ಚುನಾವಣಾ ಆಯೋಗದಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಸದೃಢ ಪ್ರಜಾಪ್ರಭುತ್ವಕ್ಕೆ ಸಂವಿಧಾನ ನೀಡಿರುವ ಮತದಾನ ಎಂಬ ಪವಿತ್ರ ಕಾರ್ಯ ಅವಶ್ಯ. 18 ವರ್ಷ ತುಂಬಿದ ಪ್ರತಿಯೊಬ್ಬರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕೆಂದರು.

ಮನೆಗಳಿಗೆ ಬೂತ್ ಮಟ್ಟದ ಅಧಿಕಾರಿಗಳು ಬಂದಾಗ ಗಣತಿ ನಮೂನೆಗಳನ್ನು ಜು. 29ರ ಒಳಗೆ ಭರ್ತಿ ಮಾಡಿಕೊಡಬೇಕು. ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸರಿ ಇದೆಯೇ, ತಿದ್ದುಪಡಿ, ಸೇರ್ಪಡೆ ಆಗಬೇಕೆ ಎಂದು ನೋಡಿಕೊಳ್ಳಬೇಕೆಂದರು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಜಿ.ಸಿ.ರವಿಕುಮಾರ ಅವರು ಮಾತನಾಡಿ, ಎಲ್ಲಾ ಅರ್ಹ ಮತದಾರರು ತಮ್ಮ ಹೆಸರನ್ನು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ನಿರ್ಲ

7 ವರ್ಷವಾದರೂ ಮುಗಿಯದ ಕಟ್ಟೇಪುರ ಏತ ನೀರಾವರಿ ಯೋಜನೆ

ಹುಸಿಯಾದ ರೈತರ ನಿರೀಕ್ಷೆ | ಪೈಪ್‌ಲೈನ್, ಜಾಕ್‌ವೆಲ್ ನಿರ್ಮಾಣಕ್ಕೆ ವಿಳಂಬ

• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣದ ಕಟ್ಟೇಪುರ ಏತ ನೀರಾವರಿ ಯೋಜನೆ ಕಾಮಗಾರಿ ಆರಂಭವಾಗಿ ಏಳು ವರ್ಷ ಕಳೆದರೂ ಮಂದಗತಿಯಲ್ಲಿ ಸಾಗುತ್ತಿದ್ದು, ರೈತರಲ್ಲಿ ನಿರಾಸೆ ಮೂಡಿಸಿದೆ.

ಹೇಮಾವತಿ ನದಿ ಜಲಾಶಯದ ತಪ್ಪಲಿನಲ್ಲೇ ಇದ್ದರೂ ನೀರಾವರಿ ಸೌಲಭ್ಯದಿಂದ ವಂಚಿತವಾಗಿರುವ ಮಲ್ಲಿಪಟ್ಟಣ ಹಾಗು ಕೊಣನೂರು ಹೋಬಳಿ ಭಾಗದ 200 ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ಸರ್ಕಾರ 190 ಕೋಟಿ ರೂ. ದೊಡ್ಡ ಮೊತ್ತದ ಕಟ್ಟೇಪುರ ಏತ ನೀರಾವರಿ ಯೋಜನೆಗೆ ಅನುಮೋದನೆ ನೀಡಿತ್ತು. ಗುತ್ತಿಗೆ ಕರಾರಿನ ಪ್ರಕಾರ ಟೆಂಡರ್ ಪಡೆದ ಗುತ್ತಿಗೆದಾರ 18 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸಿ ಕೆರೆ ಕಟ್ಟೆಗಳಿಗೆ ನೀರು ಹರಿಸ ಬೇಕಿತ್ತಾದರೂ ಇಂದಿಗೂ ಕಾಮಗಾರಿ ಅಪೂರ್ಣ ಗೊಂಡಿದೆ. ಸರ್ಕಾರ ಈಗಾಗಲೇ 180 ಕೋಟಿ ರೂ. ಅನುದಾನ ಒದಗಿಸಿದರೂ ಕಾಮಗಾರಿ ತೆವಳುತ್ತಿದೆ. ಸಾವಿರಾರು ಎಕರೆ ಕೃಷಿ ಭೂಮಿಗೆ ಕೆರೆ ಕಟ್ಟೆಗಳ ಮೂಲಕ ನೀರು ತುಂಬಿಸಿ ಹರಿಸುವ ಉದ್ದೇಶದಿಂದ ಆರಂಭಿಸಲಾದ ಈ ಯೋಜನೆಯ ಪ್ರಮುಖ ಕಾಮಗಾರಿಗಳಾದ ಜಾಕ್‌ವೆಲ್, ಪಂಪ್‌ಹೌಸ್ ನಿರ್ಮಾಣ, ಬೃಹತ್ ಕೊಳವೆ ಪೈಪ್‌ಲೈನ್ ಅಳವಡಿಕೆ ಹಾಗು ವಿತರಣೆ ವ್ಯವಸ್ಥೆ ಇನ್ನೂ ಮುಗಿದಿಲ್ಲ. ಜೊತೆಗೆ ವಿದ್ಯುದ್ದೀಕರಣ ಕಾಮ ಗಾರಿಯನ್ನು ಇನ್ನೂ ಕೈಗೆತ್ತಿಕೊಳ್ಳದಿರುವುದು ಯೋಜನೆ ವಿಳಂಬಕ್ಕೆ ಪ್ರಮುಖ ಕಾರಣವಾಗಿದೆ.

ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದರಿಂದ ನೀರು ತುಂಬಬೇಕಿದ್ದ ಕೆರೆ-ಕಟ್ಟೆಗಳು ಇನ್ನೂ ಖಾಲಿಯಾಗಿದ್ದು, ರೈತರು ಮಳೆಯನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾ ಗಿದೆ. ಯೋಜನೆ ಪೂರ್ಣಗೊಂಡಿದ್ದರೆ ಕೃಷಿಗೆ ನೀರಿನ ಸಮಸ್ಯೆ ಬಹುತೇಕ ನಿವಾರಣೆಯಾ ಗುತ್ತಿತ್ತು ಎನ್ನುತ್ತಾರೆ ರೈತರು.

ಸೋಮವಾರಪೇಟೆ ತಾಲ್ಲೂಕು ಕಟ್ಟೇಪುರ ಗ್ರಾಮದ ಬಳಿ ಹೇಮಾವತಿ ನದಿ ಹಿನ್ನೀರಿನಲ್ಲಿ ಜಾಕ್‌ವೆಲ್ ನಿರ್ಮಿಸಿ ಮುಸವತ್ತೂರು ಬಳಿ ಬೃಹತ್ ನೀರಿನ ತೊಟ್ಟಿ ಸ್ಥಾಪಿಸಬೇಕು. ನದಿಯಿಂದ 10 ಕಿ.ಮೀ. ಉದ್ದದವರೆಗೆ ರೇಸಿಂಗ್ ಮೇನ್ ಪೈಪ್‌ಲೈನ್ ಅಳವಡಿಸುವ ಮೂಲಕ ತೊಟ್ಟಿಗೆ ನೀರು ತುಂಬಿಸಬೇಕು. ಅಲ್ಲಿಂದ ತೊಟ್ಟಿಗೆ ತುಂಬಿದ ನೀರು 70 ಕಿ.ಮೀ. ದೂರದ ವರೆಗೆ ಕೆರೆ ಕಟ್ಟೆಗಳಿಗೆ ಹರಿಯಲು ಕೊಳವೆ ಪೈಪ್‌ಗಳನ್ನು ಅಳವಡಿಸಬೇಕು. ಆ ಮೂಲಕ ಕೆರೆ ಕಟ್ಟೆಗಳಿಗೆ ತುಂಬಿದ ನೀರು ರೈತರ ಜಮೀನುಗಳಿಗೆ ನೀರುಣಿಸಲು ನೆರವಾಗಲಿದೆ. ಜೀವಸೆಲೆ ಇಲ್ಲದೆ ಬರಡಾಗಿರುವ ಭೂಮಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದೆ.

ತಾಲ್ಲೂಕಿನಲ್ಲಿ ಎರಡು ಜೀವ ನದಿಗಳು ಹಾದು ಹೋಗಿದ್ದು ದಕ್ಷಿಣಕ್ಕೆ ಕಾವೇರಿ ಹಾಗೂಉತ್ತರಕ್ಕೆ ಹೇಮಾವತಿ ಹೊಳೆ ಹರಿಯುತ್ತಿದೆ. ನದಿಗಳ ಉದ್ದಕ್ಕೂ ಸಾವಿರಾರು ಎಕರೆ ವಿಸ್ತಾವರವಾದ ಭೂ ಪ್ರದೇಶ ಹೊಂದಿದೆ. ರೈತರ ಅಚ್ಚುಕಟ್ಟು ಜಮೀನು ವ್ಯಾಪ್ತಿಯಲ್ಲಿ ಸಾವಿರಾರು ಕೆರೆ ಕಟ್ಟೆಗಳು ಜೀವಸೆಲೆ ಇಲ್ಲದೆ ಬಣಗುಡುತ್ತಿವೆ. ಹಲವಾರು ದಶಕಗಳು ಕಳೆದರೂ ನೀರಾವರಿ ಸೌಲಭ್ಯ ಇಲ್ಲದೆ ಈ ಭಾಗದ ರೈತರ ಜಮೀನುಗಳಿಗೆ ನೀರುಣಿಸದೆ ವಂಚಿತವಾ ಗಿದ್ದು ಸಮುದ್ರದ ನಂಟು ಉಪ್ಪಿಗೆ ಬರ ಎನ್ನುವಂತಾಗಿದೆ.



ಕಟ್ಟೇಪುರ ಏತ ನೀರಾವರಿ ಯೋಜನೆ ಜಾಕ್ ವೆಲ್ ಪಂಪ್ ಹೌಸ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದ್ದು ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ. ರೈಸಿಂಗ್ ಮೇನ್ ಕಾಮಗಾರಿಯು 8650 ಮೀ. ಪೂರ್ಣಗೊಂಡಿದ್ದು, ಉಳಿದ 1450 ಮೀ. ಪೈಪ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಡೆಲಿವರಿ ಛೇಂಬರ್ ಹಾಗು ಪಂಪ್ ಮೋಟಾರು ಒದಗಿಸಿ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ವಿದ್ಯುತ್ ಸಂಬಧಿತ ಕೆಲಸವನ್ನು ಮುಂದಿನ ತಿಂಗಳು ಪ್ರಾರಂಭಿ ಸಲಾಗುವುದು.
-ಮಹೇಶ್, ಇಂಜಿನೀಯರ್, ಹಾರಂಗಿ ಇಲಾಖೆ, ಕುಶಾಲನಗರ

ಶೀಘ್ರ ಕಾಮಗಾರಿ ಮುಗಿಸಲು ಆಗ್ರಹ

ಮಳೆಗಾಲದಲ್ಲಷ್ಟೇ ಕೆರೆ ಕಟ್ಟೆಗಳಿಗೆ ಒಂದಿಷ್ಟು ನೀರು ಹರಿಯುತ್ತಿದೆ. ಬೇಸಿಗೆ ಬರಗಾಲ ಶುರುವಾದ ಬಳಿಕ ಕೆರೆ ಕಟ್ಟೆಗಳ ಒಡಲು ಬರಿದಾಗಿ ಅಂತರ್ಜಲ ಬತ್ತಿ ಬರಡು ಭೂಮಿಯಂತಾಗಿ ಜನ ಜಾನುವಾರುಗಳಿಗೆ ಕುಡಿಯಲು ಕೂಡ ನೀರಿಲ್ಲದೇ ಪರಿತಪಿಸುವುದು ತಪ್ಪಿಲ್ಲ. ಎರಡು ಜೀವ ನದಿಗಳನ್ನು ಹೊಂದಿದ್ದರೂ ಕೃಷಿ ಜಮೀನುಗಳಿಗೆ ನೀರು ಹರಿಯದ ದುಸ್ಥಿತಿ ತಲೆದೋರಿದೆ. ಈ ಭಾಗದಲ್ಲಿ ಮಳೆ ಕೊರತೆಯಾದಾಗ ಬೆಳೆಗಳು ಒಣಗುವುದು ಸಾಮಾನ್ಯವಾಗಿದ್ದು, ಏತ ನೀರಾವರಿ ಯೋಜನೆ ಶೀಘ್ರ ಪೂರ್ಣಗೊಂಡರೆ ಕೃಷಿ ಚಟುವಟಿಕೆಗಳಿಗೆ ಹೊಸ ಚೈತನ್ಯ ದೊರೆ ಯಲಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಕೆರೆ ಕಟ್ಟೆಗಳನ್ನು ತುಂಬಿಸಿ ಜಮೀನು ಗಳಿಗೆ ನೀರು ಹರಿಸಬೇಕೆಂಬುದು ರೈತರ ಆಗ್ರಹವಾಗಿದೆ.

ಅಕ್ರಮವಾಗಿ ನೂರಾರು ಲೋಡ್ ಮರಳು ಶೇಖರಣೆ

» ಮೊದಲನೇ ಪುಟದಿಂದ

ದಂಧೆಕೋರರು ಪೊಲೀಸ್ ಇಲಾಖೆ, ಕಂದಾಯ ಇಲಾಖೆ ಹಾಗು ಭೂ ಮತ್ತು ಗಣಿ ಇಲಾಖೆಯ ಅಧಿಕಾರಿಗಳ ಚಲನ ವಲನಗಳ ಮೇಲೆಯೇ ಕಣ್ಣಿಟ್ಟು ಅಧಿಕಾರಿಗಳನ್ನೇ ಯಾಮಾರಿಸುತ್ತಿದ್ದಾರೆ. ಅಧಿಕಾರಿಗಳು ಎತ್ತ ಹೋಗುತ್ತಾರೆಂಬ ಮಾಹಿತಿ ಪಡೆದು, ಅವರಿಗೆ ದಾರಿ ತಪ್ಪಿಸಿ ಅಕ್ರಮವಾಗಿ ಮರಳು ದಂಧೆ ನಡೆಸುತ್ತಿದ್ದಾರೆ.

ನದಿಯಿಂದ ಪಿಕಪ್ ವಾಹನಗಳ ಮೂಲಕ ಮರಳನ್ನು ತಂದು ಒಂದು ಕಡೆ ಶೇಖರಣೆ ಮಾಡಲಾಗುತ್ತದೆ. ಆ ಬಳಿಕ ದೊಡ್ಡ ಲಾರಿಗಳ ಮೂಲಕ ಹೊರ ಊರುಗಳಿಗೆ ಸಾಗಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ.

ಮೂರು ಪಿಕಪ್ ವಾಹನ ವಶ

ಅಕ್ರಮ ಮರಳು ದಂಧೆಯ ಮೇಲೆ ನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಹೇಶ್ ಅವರು ದಾಳಿ ನಡೆಸಿ, 3 ಪಿಕಪ್‌ವಾಹನಗಳನ್ನು ಮರಳು ಸಮೇತ ವಶಪಡಿಸಿಕೊಂಡು, ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಧ್ಯರಾತ್ರಿ ನಡೆದ ಕಾರ್ಯಾಚರಣೆಯಲ್ಲಿ ಪಟ್ಟಣದ ಸಮೀಪದ ಹೆದ್ದಾರಿ ಸೇತುವೆಯ ಬಳಿ ದಂಧೆಕೋರರು ಮರಳು ಸಾಗಾಟಕ್ಕೆ ಮುಂದಾಗಿದ್ದರು. ಈ ಬಗ್ಗೆ ಖಚಿತ ಮಾಹಿತಿ ಪಡೆದು ಸ್ಥಳಕ್ಕೆ ತೆರಳಿದ ಪೊಲೀಸರು ಧರ್ಮ, ಅಪ್ಪರ್ ಹಾಗು ರಾಜಾಕ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲೆಯಲ್ಲಿ 15,17,024 ಎಸ್‌ಐಆರ್ ನಮೂನೆ ವಿತರಣೆ

» ಮೊದಲನೇ ಪುಟದಿಂದ

ಜಿಲ್ಲಾಡಳಿತ ತರಬೇತಿ ನೀಡಿದಂತೆ ನೋಂದಣಾಧಿಕಾರಿಗಳು, ಸಹಾಯಕ ಅಧಿಕಾರಿಗಳು ಹಾಗು ಮತಗಟ್ಟೆ ಮಟ್ಟದ ಬಿಎಲ್‌ಒ ಅಧಿಕಾರಿಗಳು ಹಿಂದಿನ ಮತದಾರರ ಪಟ್ಟಿಯಲ್ಲಿರುವ ಮಾಹಿತಿ ಪರಿಶೀಲಿಸಿ, ಆಗತ್ಯ ಹಾಗು ತಿದ್ದುಪಡಿ ವಿವರ ನಮೂದಿಸಿಕೊಂಡು ನಂತರ ಬಿಎಲ್‌ಒ ಆ್ಯಪ್ ಮೂಲಕ ಡಿಜಿಟಲೀಕರಣ ಮಾಡುತ್ತಾರೆ. ಈ ಹಂತದಲ್ಲಿ ಮತದಾರರಿಂದ ಯಾವುದೇ ದಾಖಲಾತಿ ಅಥವಾ ಪ್ರಮಾಣಪತ್ರ ಪಡೆಯುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಮನೆಗೆ ಭೇಟಿ ನೀಡುವ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಅಗತ್ಯ ಮಾಹಿತಿಯನ್ನು ಸರಿಯಾಗಿ ನೀಡುವ ಮೂಲಕ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಯಶಸ್ವಿಗೊಳಿಸಬೇಕು. ನಿಖರ ಹಾಗು ದೋಷರಹಿತ ಮತದಾರರ ಪಟ್ಟಿಯೇ ಮುಂಬರುವ ಚುನಾವಣೆಗಳ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಗೆ ಪ್ರಮುಖ ಆಧಾರವಾಗಿರುವುದರಿಂದ ಪ್ರತಿಯೊಬ್ಬ ಮತದಾರರೂ ಸಹಕರಿಸಿ ಎಂದು ವಿನಂತಿಸಿದರು.

ಜು.19ಕ್ಕೆ ಕೆ.ಟಿ.ಶಿವಪ್ರಸಾದ್ ನುಡಿ ನಮನ

» ಮೊದಲನೇ ಪುಟದಿಂದ

ಹೋರಾಟ ಪ್ರಮುಖವಾದುದು. ಆ ಬಳಿಕ ಅದು ರಾಜ್ಯದ ವಿವಿಧ ಭಾಗಗಳಿಗೆ ವಿಸ್ತರಿಸಿ ರೈತರ ಮನೆ ಜಪ್ತಿಯನ್ನು ಸಂಪೂರ್ಣ ಕೈಬಿಡಲಾಯಿತು. ಹೀಗೆ ಅನೇಕ ಹೋರಾಟಗಳಲ್ಲಿ ಶಿವಪ್ರಸಾದ್ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಅವರ ಸೇವೆಯನ್ನು ಸಮಾಜ ಯಾವಾಗಲೂ ಸ್ಮರಿಸಬೇಕೆಂದರು.

ಕೆ.ಟಿ.ಶಿವಪ್ರಸಾದ್ ಅವರ ಹೆಸರಿನಲ್ಲಿ ಶಾಶ್ವತ ಕಲಾಗ್ರಾಮ ಸ್ಥಾಪಿಸುವಂತೆ ಸರ್ಕಾರ, ಜಿಲ್ಲಾಡಳಿತ ಹಾಗು ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗುವುದು. ಕಲಾಗ್ರಾಮದಲ್ಲಿ ಚಿತ್ರಕಲಾ ಗ್ಯಾಲರಿ, ಲಲಿತಕಲೆ ಅಧ್ಯಯನ ಕೇಂದ್ರ, ನಾಟಕ ಹಾಗು ಜನಪದ ಚಟುವಟಿಕೆಗಳಿಗೆ ವೇದಿಕೆ, ಯುವ ಕಲಾವಿದರಿಗೆ ತರಬೇತಿ ಕೇಂದ್ರ ಮತ್ತು ಸಾಂಸ್ಕೃತಿಕ ಸಂಶೋಧನಾ ಘಟಕಗಳನ್ನು ಸ್ಥಾಪಿಸುವಂತೆ ಒತ್ತಾಯಿಸಲಾಗುವುದು. ಇಂತಹ ಕೇಂದ್ರ ನಿರ್ಮಾಣವಾದರೆ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಹಾಗು ಮುಂದಿನ ತಲೆಮಾರಿಗೆ ಕಲಾ ಪರಂಪರೆಯನ್ನು ಪರಿಚಯಿಸುವ ಕೆಲಸವಾಗಲಿದೆ ಎಂದರು.

ಕೆ.ಟಿ.ಶಿವಪ್ರಸಾದ್ ಒಡನಾಡಿಗಳ ಬಳಗದ ಬಿ.ಎಸ್.ದೇಸಾಯಿ, ಎಂ.ಸೋಮಶೇಖರ್, ಧರ್ಮೇಶ್, ಕೃಷ್ಣದಾಸ್, ಚಲಂಹಾಡ್ಲಳ್ಳಿ, ಹೆಚ್.ಆರ್.ನವೀನ್ ಕುಮಾರ್ ಹಾಜರಿದ್ದರು.

ಅಪಘಾತ: ಯುವಕ ಸಾವು

• ಪ್ರಜೋದಯ ವರದಿ

ಬೇಲೂರು: ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ಯುವಕ ಮೃತಪಟ್ಟಿರುವ ಘಟನೆ ಪಟ್ಟಣದ ಸಮನ್ವಯ ಹೋಟೆಲ್ ಮುಂಭಾಗ ನಡೆದಿದೆ.

ಇಬ್ಬೀಡು ಗ್ರಾಮದ ದರ್ಶನ್ (26) ಮೃತ ಯುವಕ. ಜು.12ರ ಸಂಜೆ 7.20ರ ಸಮಯದಲ್ಲಿ ಪಟ್ಟಣದಿಂದ ಊರಿಗೆ ಹೋಗುತ್ತಿದ್ದಾಗ ನೆಹರು ಸರ್ಕಲ್ ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಹೊಡೆದ ಪರಿಣಾಮ ನೆಲಕ್ಕೆ ಬಿದ್ದ ದರ್ಶನ್ ಗಂಭೀರ ಗಾಯಗೊಂಡಿದ್ದರು. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ತೀವ್ರ ರಕ್ತಸ್ರಾವವಾಗಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯೋಗ ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲೆಯ ಯೋಗ ಶಿಕ್ಷಕರನ್ನು ಗುರುತಿಸಿ ಗೌರವಿಸಲು ಬೆಂಗಳೂರಿನ ರೋಟರಿ ಹಾಗು ಗ್ಲೋಬಲ್ ಯೋಗ ಟ್ರಸ್ಟ್ ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ.

ತಾಲ್ಲೂಕುವಾರು ಯೋಗ ಶಿಕ್ಷಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಯೋಗಶ್ರೀ ಪ್ರಶಸ್ತಿ (ಪುರುಷ ಯೋಗ ಸಾಧಕರಿಗೆ), ಯೋಗ ಜ್ಯೋತಿ ಪ್ರಶಸ್ತಿ (ಮಹಿಳಾ ಯೋಗ ಸಾಧಕರಿಗೆ), ಯೋಗ ರತ್ನ ಪ್ರಶಸ್ತಿ (ಎಂ.ಎಸ್ಸಿ)ಯನ್ನು ಯೋಗ ಪದವಿ ಪಡೆದು ಸಕ್ರಿಯವಾಗಿ ಯೋಗ ಶಿಕ್ಷಕರ ತರಬೇತಿ ಕೇಂದ್ರ ನಡೆಸುತ್ತಿರುವವರಿಗೆ, ಯೋಗದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು 60 ವರ್ಷ ಮೇಲ್ಪಟ್ಟ ನಾಗರಿಕರಿಗೆ ನೀಡಲಾಗುತ್ತಿದೆ.

ಆಸಕ್ತ ಅರ್ಹರು ಅಧಿಕೃತ ಯೋಗ ಸಂಸ್ಥೆ ಅಥವಾ ವಿಶ್ವವಿದ್ಯಾಲಯಗಳಿಂದ ಡಿಪ್ಲೋಮಾ, ಪದವಿ ಅಥವಾ ಇತರ ಮಾನ್ಯತೆ ಪಡೆದ ಪ್ರಶಸ್ತಿಗಳನ್ನು ಹೊಂದಿರಬೇಕು. ಯೋಗ ಶಿಕ್ಷಣ ತರಬೇತಿ ಕೇಂದ್ರಗಳನ್ನು ನಡೆಸುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ವಿಳಾಸ ಒದಗಿಸಬೇಕು.

ಯೋಗಾಸನ ಸ್ಪರ್ಧೆಗಳಲ್ಲಿ ಪಡೆದಿರುವ ಪ್ರಶಸ್ತಿಗಳು ಹಾಗೂ ಇತರ ಗೌರವಾನ್ವಿತ ಪುರಸ್ಕಾರ ಗಳ ಮಾಹಿತಿ ನೀಡಬೇಕು. ಗ್ಲೋಬಲ್ ಯೋಗ ಟ್ರಸ್ಟ್ ನಿಗದಿಪಡಿಸಿರುವ ನಿರ್ದಿಷ್ಟ ನಮೂನೆ ಯಲ್ಲಿಯೇ ಅರ್ಜಿ ಸಲ್ಲಿಸಬೇಕು. ಜು.19 ಅರ್ಜಿ ಸಲ್ಲಿಸಲು ಕಡೆ ದಿವಾಗಿದೆ. ಮಾಹಿತಿಗೆ ಗ್ಲೋಬಲ್ ಯೋಗ ಸಮಿತಿ ಅಧ್ಯಕ್ಷ ನಿರಂಜನರಾಜು (99008594575) ಅವರನ್ನು ಸಂಪರ್ಕಿಸಲು ತಿಳಿಸಿದೆ.

ವಳಗೆರಮ್ಮ ದೇಗುಲ ಅಭಿವೃದ್ಧಿಗೆ ಬಾಲಕೃಷ್ಣ ಸೂಚನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಭಕ್ತರ ಅನುಕೂಲಕ್ಕಾಗಿ ಸ್ವಚ್ಛ ಭಾರತ್ ಯೋಜನೆಯಡಿ ವಳಗೆರಮ್ಮ ದೇವಸ್ಥಾನ ಆವರಣದಲ್ಲಿ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಪುರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ವಳಗೆರಮ್ಮ ದೇವಸ್ಥಾನದ ಆವರಣದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ನೂತನವಾಗಿ ನಿರ್ಮಿಸಿರುವ ರಥದ ಮನೆಯನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದ ಅವರು, ವಳಗೆರಮ್ಮ ಗ್ರಾಮ ದೇವತೆಯಾಗಿದ್ದು ಭಕ್ತರ ಸಂಖ್ಯೆಯು ಹೆಚ್ಚಿದೆ. ರಸ್ತೆ, ದೇವಾಲಯದ ಆವರಣದಲ್ಲಿ ನೆಲಹಾಸು ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ದೇಗುಲ ಸೇವಾ ಸಮಿತಿ ಮನವಿಯಂತೆ ಪ್ರತಿ ವರ್ಷ ಜಾತ್ರೆಗೆ ಪುರಸಭೆಯಿಂದ 1 ಲ. ರೂ. ಅನುದಾನ ನೀಡಲಾಗುವುದು ಎಂದರು.

ಪ್ರತಿ ಅಮವಾಸೆ ವಿಶೇಷ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಭಕ್ತಾಧಿಗಳಿಗೆ ಅನುಕೂಲವಾಗಲೆಂದು ಊಟದ ಮನೆ ಸೇರಿ ದೇವಸ್ಥಾನದ ಛಾವಣಿಗೆ ಸೀಟ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ದೇವಸ್ಥಾನಕ್ಕೆ ಸೇರಿದ 4 ಎಕರೆ ಜಮೀನು ಪಟ್ಟಣದ ಹೃದಯ ಭಾಗದಲ್ಲಿದ್ದು ದೇವಾಲಯದ ಅಭಿವೃದ್ಧಿಗೆ ಈ ಜಮೀನು ಬಳಕೆಯಾಗಬೇಕು. ದೇವಸ್ಥಾನದ ಜಮೀನನ್ನು ಅನ್ಯರ ಪಾಲಾಗದಂತೆ ರಕ್ಷಿಸುವುದು ಜವಾಬ್ದಾರಿ. ದೇವಾಲಯ ಆಸ್ತಿಗಳನ್ನು ದುರುಪಯೋಗಪಡಿಸಿ ಕೊಳ್ಳಬಾರದು. ದೇವಾಲಯ ಅಭಿವೃದ್ಧಿಗೆ ಇರುವ ಜಮೀನುಗಳನ್ನು ದೇವಾಲಯದ ಆಸ್ತಿ, ಆಡಳಿತ ಮಂಡಳಿಯವರು ಆಸ್ತಿ ರಕ್ಷಣೆ ಮಾಡಬೇಕೆಂದರು.

ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್, ಮಾಜಿ ಅಧ್ಯಕ್ಷ ಕೋಟೆ ಮೋಹನ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಸದಸ್ಯರಾದ ಸತ್ಯನಾರಾಯಣ, ಗಣೇಶ್, ಮುಖಂಡರಾದ ಜೈದೀಪ್ ಬಾಲಕೃಷ್ಣ, ಶಾಮಿಯಾನ ರಘು, ರಾಜು, ಗುಡಿ ಗೌಡರ ವಂಶಸ್ಥರಾದ ಸಿ.ಎನ್.ದೇವರಾಜು, ಬಾಬು ನಾಗರಾಜು,ಸಿ.ಡಿ.ನಾಗೇಂದ್ರ, ಉಮೇಶ್, ಧೀರಜ್ ಭಾಗವಹಿಸಿದ್ದರು.

ಗವೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಕೆಟ್ಟ ಹೆಸರು ತರಬೇಡಿ

• ಪ್ರಜೋದಯ ವರದಿ

ಹಾಸನ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಪಕ್ಷಾತೀತವಾಗಿ ನಡೆದಿದ್ದರೂ ಅದನ್ನು ರಾಜಕೀಯ ಪಕ್ಷದ ಗೆಲುವೆಂದು ಬಣ್ಣಿಸುತ್ತಿರುವುದು ಖಂಡನೀಯ. ಸುಳ್ಳು ಸುದ್ದಿ ಮೂಲಕ ಸಂಘಕ್ಕೆ ಕೆಟ್ಟ ಹೆಸರು ತರಬೇಡಿ ಎಂದು ಗವೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಬಾಲಕೃಷ್ಣ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಚುನಾವಣೆ ಯಾವುದೇ ರಾಜಕೀಯ ಪಕ್ಷದ ಚಿಹ್ನೆಯಡಿ ನಡೆದಿಲ್ಲ. ಸದಸ್ಯರು ಸ್ವತಂತ್ರ ಅಭಿಪ್ರಾಯದ ಮೇರೆಗೆ ನಿರ್ದೇಶಕರನ್ನು ಆವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಆದರೆ, ಕೆಲವರು ಗೆಲುವನ್ನು ಜೆಡಿಎಸ್ ಸಾಧನೆಯಂತೆ ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸುತ್ತಿದ್ದಾರೆ. ಚುನಾವಣೆ ಪ್ರಕ್ರಿಯೆ ಬಳಿಕ ರೂಢಿಯಂತೆ ವಿಜೇತರೆಲ್ಲರೂ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಭೇಟಿಯಾಗಿದ್ದರು. ಆಗ ಶಾಸಕರು